ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 96 RNI Number : KNKAN/25/A2770 15-04-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :96 ರಾಯಚೂರು 15-04-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ಬಿಹಾರದ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ : ನಾಳೆಯೇ ಪ್ರಮಾಣವಚನ ಸ್ವೀಕಾರ

ಪಾಟ್ನಾ (ಬಿಹಾರ): ಬಿಹಾರದ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ ಅವರನ್ನು ಆಯ್ಕೆ ಮಾಡಲಾಗಿದೆ. ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ಇಂದು ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ.

ಪಕ್ಷದ ಶಾಸಕಾಂಗ ಸಭೆಯಲ್ಲಿ ಚೌಧರಿ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ತಾರಾಪುರದ ಬಿಜೆಪಿ ಶಾಸಕ ಚೌಧರಿ ಅವರು ಎನ್‌ಡಿಎ ಶಾಸಕಾಂಗ ಪಕ್ಷವಾಗಿ ಆಯ್ಕೆಯಾದ ನಂತರ ಬಿಹಾರದ ಮುಂದಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಲಿದ್ದಾರೆ.

ಬಿಹಾರದಲ್ಲಿ ನಿತೀಶ್ ಕುಮಾರ್ ಯುಗದ ಅಂತ್ಯದೊಂದಿಗೆ, ಸಾಮ್ರಾಟ್ ಯುಗ ಪ್ರಾರಂಭವಾಗುತ್ತಿದೆ. ಸಾಮ್ರಾಟ್ ಯುಗ ಎಂದರೆ ರಾಕೇಶ್ ಕುಮಾರ್ ಅವರನ್ನು ಸಾಮ್ರಾಟ್ ಚೌಧರಿ ಎಂದೂ ಕರೆಯುತ್ತಾರೆ. ಹೌದು, ಇದು ಕೇವಲ ಎಂಟು ವರ್ಷಗಳ ಹಿಂದೆ ಬಿಜೆಪಿಗೆ ಸೇರಿ ಅದರ ಉನ್ನತ ನಾಯಕರಲ್ಲಿ ಒಬ್ಬರಾದ ಅದೇ ಸಾಮ್ರಾಟ್.

ಚೌಧರಿ ಮೊದಲ ಪ್ರತಿಕ್ರಿಯೆ: ಇದು ನನಗೆ ಮಾತ್ರ ಒಂದು ಹುದ್ದೆಯಲ್ಲ - ಸಾಮ್ರಾಟ್: ಹೊಸ ಮುಖ್ಯಮಂತ್ರಿಯಾಗಿ ಆಯ್ಕೆಯಾದ ನಂತರ, ಸಾಮ್ರಾಟ್ ಚೌಧರಿ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ. ಭಾರತೀಯ ಜನತಾ



ಪಕ್ಷದ ಕೇಂದ್ರ ನಾಯಕತ್ವಕ್ಕೆ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆ ವ್ಯಕ್ತಪಡಿಸುತ್ತೇನೆ. ಇದು ನನಗೆ ಕೇವಲ ಒಂದು ಹುದ್ದೆಯಲ್ಲ, ಆದರೆ, ಬಿಹಾರದ ಜನರಿಗೆ ಸೇವೆ ಸಲ್ಲಿಸಲು, ಅವರ ನಂಬಿಕೆ ಮತ್ತು ಕನಸುಗಳನ್ನು ಈಡೇರಿಸಲು ಒಂದು ಪವಿತ್ರ ಅವಕಾಶ. ಸಂಪೂರ್ಣ ನಿಷ್ಠೆ, ಸಮರ್ಪಣೆ ಮತ್ತು ಪ್ರಾಮಾಣಿಕತೆಯೊಂದಿಗೆ ಜನರ ನಿರೀಕ್ಷೆಗಳಿಗೆ ತಕ್ಕಂತೆ ಬದುಕಲು ನಾನು ಪ್ರತಿಜ್ಞೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಸಾಮ್ರಾಟ್ ರಾಜಕೀಯ ಹಿನ್ನೆಲೆ - ಚೌಧರಿ ತಂದೆ 7 ಬಾರಿ : ನವೆಂಬರ್ 16, 1968 ರಂದು ಮುಂಗೇರ್ ಜಿಲ್ಲೆಯ ಲಖನ್ಪುರದಲ್ಲಿ ರಾಜಕಾರಣಿ ಶಕುನಿ ಚೌಧರಿ ಮತ್ತು ಪಾರ್ವತಿ ದೇವಿ ದಂಪತಿಗೆ ಜನಿಸಿದ ಸಾಮ್ರಾಟ್ ಚೌಧರಿ, ಈಗ ಬಿಹಾರದ ಮುಖ್ಯಮಂತ್ರಿಯಾಗಲಿದ್ದಾರೆ. ಸಾಮ್ರಾಟ್ ಚೌಧರಿ ದೊಡ್ಡ ರಾಜಕೀಯ ಹಿನ್ನೆಲೆಯನ್ನು ಹೊಂದಿದ್ದಾರೆ. ಅವರ ತಂದೆ ಶಕುನಿ ಚೌಧರಿ ಪ್ರಸಿದ್ಧ ರಾಜಕಾರಣಿ ಮತ್ತು ಸಮತಾ ಪಕ್ಷದ ಸ್ಥಾಪಕ ಸದಸ್ಯರಾಗಿದ್ದರು. 7 ಬಾರಿ ಎಂಎಲ್‌ಎ ಹಾಗೂ ಒಂದು ಬಾರಿ ಸಂಸದರಾಗಿ ಕೆಲಸ ಮಾಡಿದ್ದರು. ಲಾಲು ಯಾದವ್ ಮತ್ತು ನಿತೀಶ್ ಕುಮಾರ್ ಅವರಿಗೂ ಆಪ್ತರಾಗಿದ್ದರು. ಸಾಮ್ರಾಟ್ ಅವರ ಶೈಕ್ಷಣಿಕ ಅರ್ಹತೆಗಳು ಹಲವಾರು ಬಾರಿ ವಿವಾದಕ್ಕೀಡಾಗಿವೆ. ಆದರೆ, ಅವರು ಗೌರವ ಡಾಕ್ಟರೇಟ್ ಕೂಡಾ ಪಡೆದಿದ್ದಾರೆ.

ಜೆಡಿಯು ತೊರೆದು ಮಾಂಝಿ ಬಣವನ್ನು ಬೆಂಬಲಿಸಿದ್ದ ಚೌಧರಿ: ಸಾಮ್ರಾಟ್ ಚೌಧರಿ ಎಂದೂ ಕರೆಯಲ್ಪಡುವ ರಾಕೇಶ್ ಕುಮಾರ್ ತಮ್ಮ ತಂದೆ ಶಕುನಿ ಚೌಧರಿ ಅವರೊಂದಿಗೆ ಆರ್‌ಜೆಡಿಯಲ್ಲಿ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದ್ದರು. 1990 ರಲ್ಲಿ ಆರ್‌ಜೆಡಿ ಸೇರ್ಪಡೆಗೊಂಡಿದ್ದರು. 1999ರಲ್ಲಿ ರಾಬ್ಡಿ ದೇವಿ ಸರ್ಕಾರದಲ್ಲಿ ಕೃಷಿ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯರಾಗಿರಲಿಲ್ಲ, ಮತ್ತು ಅವರ ವಯಸ್ಸಿನ ವಿವಾದದಿಂದಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು.

2000 ಮತ್ತು 2010 ರಲ್ಲಿ ಪರ್ಬಟ್ಟಾ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ ಆದರು. 2014 ರಲ್ಲಿ ಕೇಂದ್ರದಲ್ಲಿ ಬಿಜೆಪಿಯ ಭರ್ಜರಿ ಗೆಲುವಿನ ನಂತರ ನಿತೀಶ್ ಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆಗ ಜಿತನ್ ರಾಮ್ ಮಾಂಝಿ ಬಿಹಾರದ ಮುಖ್ಯಮಂತ್ರಿಯಾಗಿದ್ದರು. 22 ಸದಸ್ಯರ ಆರ್‌ಜೆಡಿಯ ಏಳು ಶಾಸಕರೊಂದಿಗೆ ಸಾಮ್ರಾಟ್ ಚೌಧರಿ ಅಂದು ಜೆಡಿಯು ಸೇರ್ಪಡೆಗೊಂಡಿದ್ದರು. ಆ ಸಂದರ್ಭದಲ್ಲಿ ಅವರು ನಗರಾಭಿವೃದ್ಧಿ ಸಚಿವರಾಗಿ ನೇಮಕಗೊಂಡಿದ್ದರು.

ಕೇವಲ ಒಂದು ವರ್ಷದ ನಂತರ ನಿತೀಶ್ ಕುಮಾರ್ ತೇಜಸ್ವಿ ಯಾದವ್ ಅವರೊಂದಿಗೆ ಸೇರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸರ್ಕಾರದಲ್ಲಿ ಅಧಿಕಾರ ವಹಿಸಿಕೊಂಡರು. ಆಗ ಸಾಮ್ರಾಟ್ ಚೌಧರಿ, ಜಿತನ್ ರಾಮ್

3ನೇ ಪುಟಕ್ಕೆ

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅದ್ದೂರಿ ಆಚರಣೆ

ಸಂವಿಧಾನವೇ ಮಾನವಕುಲಕ್ಕೆ ಒಂದೇ ಗ್ರಂಥ ಶಾಸಕ ಶಿವರಾಜ್ ಪಾಟೀಲ್

ರಾಯಚೂರು,ಏ.14-

ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಇಂದು ಬೆಳಿಗ್ಗೆ 11.30 ಗಂಟೆಗೆ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ



ಕುಮಾರ್ ಕಾಂದೂ (ಭಾ.ಆ.ಸೇ) ಉದ್ಘಾಟಿಸಿ ಉದ್ಘಾಟನಾ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರಪಂಚದಲ್ಲಿನ ಎಲ್ಲಾ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿದ ಮಹಾನ್ ಚಿಂತಕರು. ಇಂದಿನ ವಿದ್ಯಾರ್ಥಿಗಳು ಅವರ ದಾರಿ ಹಾಗೂ ಉಪದೇಶಗಳನ್ನು ಪಾಲಿಸಬೇಕು ಎಂದು ಹೇಳಿದರು. ಶಿಕ್ಷಣ ಮತ್ತು ಮಹಿಳಾ ಸಬಲೀಕರಣ ಸಮಾಜದಲ್ಲಿ ಗಟ್ಟಿಯಾಗಿ ಬೇರು ಬಿಡಲು ಅಂಬೇಡ್ಕರ್ ಅವರೇ ಕಾರಣರಾಗಿದ್ದು, ಮಹಿಳೆಯರಿಗೆ ಶಿಕ್ಷಣದ ಹಕ್ಕನ್ನು ದೊರಕಿಸಿಕೊಟ್ಟ ಮಹಾನ್ ನಾಯಕರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಕುವೆಂಪು ಕನ್ನಡ ಅಧ್ಯಯನ ಕುಪ್ಪಳ್ಳಿ ನಿರ್ದೇಶಕರಾದ ಹಿರಿಯ ವಿದ್ವಾಂಸ ಡಾ. ಬಿ.ಎಂ. ಪುಟ್ಟಯ್ಯ ಮಾತನಾಡಿ, ರಾಜ್ಯ ಸರ್ಕಾರವು ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರನ್ನು ಎಲ್ಲಾ ಕಾರ್ಯಕ್ರಮಗಳು, ಬ್ಯಾನರ್‌ಗಳು ಹಾಗೂ ಸಂಶೋಧನಾ ವಿಶ್ವವಿದ್ಯಾಲಯಗಳಲ್ಲಿ ''ಡಾ. ಬಾಬಾ ಸಾಹೇಬ್ ಅಂಬೇಡ್ಕ'ರ್ ಎಂದು ಪೂರ್ತಿಯಾಗಿ ಬರೆಯುವಂತೆ ಸೂಚಿಸಬೇಕು ಎಂದು ಆಗ್ರಹಿಸಿದರು. ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕುಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಅಳವಡಿಸಬೇಕು ಎಂದು ಹಕ್ಕೊತ್ತಾಯ ಮಂಡಿಸಿದರು.

ಅಂಬೇಡ್ಕರ್ ಅವರ ಜ್ಞಾನ ಸಮಕಾಲೀನವಾಗಿದ್ದು, ಸಾವಿರಾರು ವರ್ಷಗಳ ಹಿಂದಿನ ಸಾಮಾಜಿಕ

3ನೇ ಪುಟಕ್ಕೆ

ಡಾ.ಬಿ.ಆರ್.ಅಂಬೇಡ್ಕರ್ 135ನೇ ಜನ್ಮ ದಿನಾಚರಣೆ

ವಿವಿಧ ಗಣ್ಯರಿಂದ ಮಾಲಾರ್ಪಣೆ, ಮೆರವಣಿಗೆಗೆ ಚಾಲನೆ

ರಾಯಚೂರು ಏಪ್ರಿಲ್ 14

ರಾಯಚೂರಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ,



ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ವಿವಿಧ ಗಣ್ಯರಿಂದ ಪೂಜೆ ಕಾರ್ಯಕ್ರಮ ನೆರವೇರಿಸಿ, ಮಾಲಾರ್ಪಣೆ ಮಾಡಿ, ಮೆರವಣಿಗೆಗೆ ಚಾಲನೆ ನೀಡಲಾಯಿತು.

ಮೆರವಣಿಗೆಯು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ರಂಗಮಂದಿರವರೆಗೆ ವಿವಿಧ ಕಲಾ ತಂಡದೊಂದಿಗೆ ಡಾ.ಬಿ.ಆರ್.ಅಂಬೇಡ್ಕರ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಬೀದರ್ ಬುದ್ಧವಿಹಾರನ ಬಂತೇಜಿ ಯಾಕತ್ಪೂರ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್, ಜಿಲ್ಲೆಯ ಪ್ರಭಾರಿ ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್,

3ನೇ ಪುಟಕ್ಕೆ

ಪ.ಪಂಚಾಯತಿಯಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಆಚರಣೆ

ಅಂಬೇಡ್ಕರ್ ದೇಶದ ಆಸ್ತಿ - ಹಾಜಿಚೌದ್ರಿ



ಸಿರವಾರ,ಏ.14-

ಡಾ ಬಿ ಆರ್ ಅಂಬೇಡ್ಕರ್ ರವರು ಅಸ್ಪೃಶ್ಯರಿಗಾಗಿ ಮತ್ತು ಅವರ ಸಾಮಾಜಿಕ ಆರ್ಥಿಕ ಪ್ರಗತಿಗಾಗಿ ನಿರಂತರವಾಗಿ ಹೋರಾಟ ಮಾಡಿದರು. ಕೇವಲ ಅಂಬೇಡ್ಕರ್ ಅವರನ್ನು ನೆನೆದು ನಂತರ ಮರೆಯುವ ಬದಲು ಸಂವಿಧಾನದ ತತ್ವಗಳನ್ನು ಪಾಲಿಸಲು ಎಲ್ಲರೂ ಮುಂದಾಗಬೇಕು, ಅಂಬೇಡ್ಕರ್ ಅವರು ದೇಶದ ಆಸ್ತಿ ಎಂದು ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ ಹೇಳಿದರು. ಪಟ್ಟಣ ಪಂಚಾಯತಿಯಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಪಣೆ ಮಾಡುವ ಮೂಲಕ 135 ನೇ ಜಯಂತಿಯನ್ನು ಆಚರಣೆ ಮಾಡಲಾಯಿತು. ಎಂ.ಆರ್.ಹೆಚ್.ಎಸ್ ಜಿಲ್ಲಾದ್ಯಕ್ಷ ಅಬ್ರಾಹಂ ಹೊನ್ನಟಗಿ ಮಾತನಾಡಿ ವಿವಿಧ ಸಂಸ್ಕೃತಿ, ಧರ್ಮದವರು ನೆಲೆಸಿರುವ ಭಾರತ ದೇಶಕ್ಕೆ ಸಮರ್ಥವಾದ ಸಂವಿಧಾನವನ್ನು ಅಂಬೇಡ್ಕರ್ ನೀಡಿದ್ದಾರೆ. ಅಂಬೇಡ್ಕರ್ ದೇಶದ ಆಸ್ತಿ. ಅವರ ಮಾದರಿ ಬದುಕು, ತತ್ವ, ಚಿಂತನೆಗಳು ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದರು. ಸದಸ್ಯ ಕೃಷ್ಣ ನಾಯಕ

3ನೇ ಪುಟಕ್ಕೆ

ಶಾಸಕರಾದ ಜಿ.ಹಂಪಯ್ಯನಾಯಕರಿಂದ ಪೋಸ್ಟರ್ ಬಿಡುಗಡೆ



ಸಿರವಾರ,ಏ.14-

ಪಟ್ಟಣದಲ್ಲಿ ಮೇ17 ರಂದು ಹಮ್ಮಿಕೊಂಡಿರುವ ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತ ಸಮಾವೇಶ ಹಾಗೂ ಸಮಾಜ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಪ್ರಚಾರ ಪೋಸ್ಟರ್ ಮಾನ್ವಿ ಶಾಸಕರಾದ ಜಿ.ಹಂಪಯ್ಯ ನಾಯಕ ಸಾಹುಕಾರ ಬಿಡುಗಡೆ ಮಾಡಲಾಯಿತು. ಇ ಸಂದರ್ಭದಲ್ಲಿ ವೆಂಕಟೇಶ್ ದೇವತಗಲ್, ಲಿಂಗಯ್ಯ ನಾಯಕ್ ಸೈದಾಪುರ, ಗಂಗಪ್ಪ, ನರಸಪ್ಪ ಚಿಕ್ಕ ಬಾದರದಿನ್ನಿ, ನಾಗೇಶ್ ನವಲಕಲ್, ನಾಗರಾಜ್ ಗೌಡ ಹೀರಾ, ದೇವಣ್ಣ ನವಲಕಲ್, ಶಿವು ಮರಾಠ ಉಪಸ್ಥಿತರಿದ್ದರು

ಡಾ.ಬಿಆರ್ ಅಂಬೇಡ್ಕರ್ ನಾಮಪಲಕಕ್ಕೆ ಮಾಲಾರ್ಪಣೆ

ಸಿರವಾರ, ಏ.14-

ಪಟ್ಟಣದ ರಾಯಚೂರು - ಲಿಂಗಸೂಗ್ರು ಮುಖ್ಯರಸ್ತೆಯಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ನಾಮ ಪಲಕಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಪಣೆ ಮಾಡುವ ಮೂಲಕ 135 ನೇ ಜಯಂತಿಯನ್ನು ಆಚರಣೆ ಮಾಡಲಾ ಯಿತು. ತಹಸೀಲ್ದಾರ ಅಶೋಕ ಪವಾರ, ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ,ಉಪಾದ್ಯಕ್ಷೆ ಲಕ್ಷ್ಮಿ, ಸಿಪಿಐ ಶಶಿಕಾಂತ ಎಂ, ತಾ.ಪಂ ಇಓ ಶಶಿಧರ ಸ್ವಾಮಿ, ಖಜಾನೆ ಇಲಾಖೆಯ ಶಂಕ್ರಮ್ಮ, ನೀರಾವರಿ ಇಲಾಖೆಯ ಎಇಇ ವಿಜಯಲಕ್ಷ್ಮಿ, ಸಿಡಿಪಿಓ ವೆಂಕಟೇಶ ದೇಸಾಯಿ, ಎನ್ ಉದಯಕುಮಾರ, ಮುಖಂಡರಾದ ರಮೇಶ ದರ್ಶನಕರ್ ಶಿವಶರಣಸಾಹುಕಾರ ಅರಕೇರಿ,



ಸದಸ್ಯರಾದ ಸದಸ್ಯರಾದ ಕೃಷ್ಣ ನಾಯಕ, ಹಸೇನ ಅಲಿಸಾಬ್, ಮಾರ್ಕಪ್ಪ, ಸೂರಿ ದುರುಗಣ್ಣ ನಾಯಕ, ಅಜೀತ್ ಕುಮಾರ ಹೊನ್ನಟಗಿ, ಮೌಲಾಸಾಬ ವರ್ಚಸ್, ಮುಖಂಡರಾದ ಗ್ಯಾನಪ್ಪ, ಬಸವ ರಾಜ ಸಾಹುಕಾರ, ಮಲ್ಲಪ್ಪ, ಬಂದೇ ನವಾಜ್, ನಾಗರಾಜ, ವಿನಯ್, ಅಬ್ರಾಹಂ ಹೊನ್ನಟಗಿ, ಮಲ್ಲಪ್ಪ ಎನ್, ಜಯಪ್ಪ, ಎಂ.ಮನೋಹರ್ ಮಾಜಿ ಉಪಾದ್ಯಕ್ಷ ಚನ್ನಪ್ಪ ಗಡ್ಲ, ಪತ್ರಕರ್ತ ಸಂಘದ ಅದ್ಯಕ್ಷ ಹನುಮೇಶ, ಸದಸ್ಯ ವಿಜಯಕುಮಾರ, ದ.ಸಾ.ಪ ಅದ್ಯಕ್ಷ ಪಾರ್ಥ, ರಾಮುಗಿಂಡಿ,ಚಂದ್ರಶೇಖರ ಹಡಪದ್, ರಾಜು ಬೋವಿ. ಸಮುದಾಯ ಸಂಘಟನೆ ಅದಿಕಾರಿ ಹಂಪಯ್ಯ ಪಾಟೀಲ್, ಜೆಇ ಹುಸೇನ ಸಾಬ್,ಇದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ

ಬೆಂಗಳೂರು.ಏ.14:

ನಾಡಿನ ಸಮಸ್ತ ಜನತೆಗೆ ಡಾ. ಬಿ.ಆರ್ ಅಂಬೇಡ್ಕರ್ ಅವರ ಜಯಂತಿಯ ಹಾರ್ದಿಕ ಶುಭಾಶಯಗಳನ್ನು ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ತಿಳಿಸಿದರು.

ಸಮಾನತೆಯ ಹರಿಕಾರರಾಗಿದ್ದ, ಅಸ್ಪೃಶ್ಯತೆ ಮತ್ತು ಅಸಮಾನತೆಯ ವಿರುದ್ಧ ಹೋರಾಡಿದ ಮಹಾನ್ ನಾಯಕ, ಭಾರತ ರತ್ನ ಹಾಗೂ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆದರ್ಶಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ಸಮಾಜಮುಖಿ ಉಪಸ್ಥಿತರಿದ್ದರು.



ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಪ್ರಿಯಾಂಕ ಖರ್ಗೆ, ಎಚ್.ಸಿ. ಮಹಾದೇವಪ್ಪ, ಜಮೀರ್ ಅಹ್ಮದ್ ಖಾನ್ ಸೇರಿದಂತೆ ಇತರ ಗಣ್ಯರು ಡಾ. ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಸಚಿವರು, ಶಾಸಕರು, ಹಿರಿಯ ಮುಖಂಡರು, ಮಹಿಳಾ ಮುಖಂಡರು ಹಾಗೂ ಮಹಿಳಾ ಮುಖಂಡರು ಅಧಿಕಾರಿಗಳು ಉಪಸ್ಥಿತರಿದ್ದರು.

ಸಿರವಾರ ನೀರಾವರಿ ಇಲಾಖೆಯ ಅಧಿಕಾರಿಗಳ ಮೇಲೆ ಆರೋಪ ಸುಳ್ಳು ರೈತರಿಂದ ಮನವಿ

ಸಿರವಾರ, ಏ.14-

ಪಟ್ಟಣದಲ್ಲಿ ಇರುವ ತುಂಗಭದ್ರಾ ಎಡದಂಡೆ ಕಾಲುವೆಯ ನೀರಾವರಿ ಇಲಾಖೆಯ ಎಇಇ ವಿಜಯಲಕ್ಷ್ಮಿ ಹಾಗೂ ಇತರ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಮಾಡಿದ್ದಾರೆ ಎಂದು ಸಂಘಟನೆ ಪದಾಧಿಕಾರಿಗಳು ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಮಾನ್ವಿ, ಕವಿತಾಳ, ಸಿರವಾರ ಉಪ ವಿಭಾಗದ ಕಾಲುವೆ ನೀರು ಬಳಕೆದಾರರು ಸೋಮವಾರ ತಹಶಿಲ್ದಾರರಿಗೆ ಎಇಇ ಅವರ ಮೇಲೆ ಪ್ರಕರಣ ಮಾಡದಂತೆ ತಡೆಯಲು ಬ್ಯಾಗವಾಟ, ಹಿರೇದಿನ್ನಿ, ಲಕ್ಕಂದಿನ್ನಿ, ಹಳ್ಳಿಹೊಸೂರ ಸೇರಿದಂತೆ ವಿವಿಧ ಗ್ರಾಮದ ರೈತರು ಮನವಿ ಮಾಡಿದರು.

ಸಿರವಾರ ಉಪ ವಿಭಾಗದ ನಂ..4 ಎಇಇ ವಿಜಯಲಕ್ಷ್ಮಿ ಅಧಿಕಾರ ವಹಿಸಿಕೊಂಡ ನಂತರ ಕೆಳ ಭಾಗದ ರೈತರಿಗೆ ಎರಡು ಬೆಳೆಗೆ



ಸಮರ್ಪಕವಾಗಿ ನೀರು ನಿರ್ವಹಣೆ ಮಾಡಿದ್ದಾರೆ.

ನೀರು ನಿರ್ವಹಣೆ ಕಾವಲುಗಾರರು ಸರಿಯಾಗಿ ಕೆಲಸ ಮಾಡಿ ಎಂದು ಅವರಿಗೆ ಒತ್ತಾಯಿಸಿದಕ್ಕೆ, ಕೆಲಸ ಮಾಡದ ಸಮಯದಲ್ಲಿ ವೇತನ ಪಾವತಿ ಮಾಡಲು ಅವಕಾಶ ನೀಡುವಂತೆ ಒತ್ತಡ ಸರಿಯಲ್ಲಾ, ನೀರು ನಿರ್ವಹಣೆ ಮಾಡುವ ಕಾವಲುಗಾರರಿಗೆ, ಕಾಲುವೆ ದುರಸ್ತಿ, ಜಂಗಲ್ ಕಟ್ ಟಂಗ್ ಇಲಾಖೆಯ ವತಿಯಿಂದ ನೇರವಾಗಿ ವೇತನ ನೀಡುವ ಅವಕಾಶ ಇಲ್ಲ, ಗುತ್ತಿಗೆ,

3ನೇ ಪುಟಕ್ಕೆ

ಜಿಲ್ಲಾ ಪೊಲೀಸರಿಂದ ಕಾರ್ಯಾಚರಣೆ; ಆರೋಪಿಗಳ ಬಂಧನ, ಲಕ್ಷಾಂತರ ರೂ. ಮೌಲ್ಯದ ಸ್ವತ್ತು ಜಪ್ತಿ : ಎಸ್ಪಿ ಅಡ್ಡೂರು ಶ್ರೀನಿವಾಸಲು



ಕಲಬುರಗಿ,ಏ.14-

ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿರುವ ಆಳಂದ, ವಾಡಿ, ಕಾಳಗಿ ಮತ್ತು ಶಹಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಸರಣಿ ಮನೆ ಕಳ್ಳತನ ಮತ್ತು ಸರಣಿ ಜಾನುವಾರುಗಳ ಕಳ್ಳತನ ಪ್ರಕರಣಗಳನ್ನು ಬೇಧಿಸಿದ ಪೊಲೀಸರು, ಆರೋಪಿಗಳನ್ನು ಬಂಧಿಸಿ ಅವರಿಂದ ಲಕ್ಷಾಂತರ ರೂ. ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಸೋಮವಾರ ಜಿಲ್ಲಾ ಪೊಲೀಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಆಳಂದ ಉಪ-ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಲಕ್ಷಾಂತರ ರೂ. ಮೌಲ್ಯದ 71 ಮೊಬೈಲ್ ಫೋನ್‌ಗಳನ್ನು ಪತ್ತೆ ಹಚ್ಚಲಾಗಿದೆ ಎಂದರು.

ಆಳಂದ ಠಾಣೆ ವ್ಯಾಪ್ತಿಯಲ್ಲಿ 3.75 ಲಕ್ಷ ರೂ. ಮೌಲ್ಯದ 16 ಮೊಬೈಲ್‌ಗಳು, ನರೋಣಾ ಠಾಣೆ ವ್ಯಾಪ್ತಿಯಲ್ಲಿ 3,20 ಲಕ್ಷ ರೂ. ಮೌಲ್ಯದ 15 ಮೊಬೈಲ್‌ಗಳು, ದೇವಲಗಾಣಗಾಪುರ ಠಾಣೆ ವ್ಯಾಪ್ತಿಯಲ್ಲಿ 2.10 ಲಕ್ಷ ರೂ. ಮೌಲ್ಯದ 10 ಮೊಬೈಲ್‌ಗಳು, ಮಾದನಹಿಪ್ಪರಗಾ ಠಾಣೆ ವ್ಯಾಪ್ತಿಯಲ್ಲಿ ಒಂದು ಲಕ್ಷ ರೂ.

ಮೌಲ್ಯದ 8 ಮೊಬೈಲ್‌ಗಳು, ಅಫಜಲಪುರ ಠಾಣೆ ವ್ಯಾಪ್ತಿಯಲ್ಲಿ 2,67,359 ರೂ. ಮೌಲ್ಯದ 16 ಮೊಬೈಲ್‌ಗಳು, ರೇವೂರ ಠಾಣೆ ವ್ಯಾಪ್ತಿಯಲ್ಲಿ 45 ಸಾವಿರ ರೂ. ಮೌಲ್ಯದ 2 ಮೊಬೈಲ್‌ಗಳು, ನಿಂಬರ್ಗಾ ಠಾಣೆ ವ್ಯಾಪ್ತಿಯಲ್ಲಿ 60 ಸಾವಿರ ರೂ. ಮೌಲ್ಯದ 4 ಮೊಬೈಲ್‌ಗಳು ಸೇರಿ 13,77,359 ರೂ. ಮೌಲ್ಯದ 71 ಮೊಬೈಲ್‌ಗಳು ಪತ್ತೆ ಹಚ್ಚಲಾಗಿದೆ ಎಂದು ವಿವರಿಸಿದರು.

ವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ 5 ಮನೆ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಿ ಮುತ್ತಗಾ ಗ್ರಾಮದ ವೀರಭದ್ರಪ್ಪ ಅಲಿಯಾಸ್ ವೀರಭದ್ರ ಸದಾಶಿವ ಪಂಚಾಳ ಎಂಬಾತನನ್ನು ಬಂಧಿಸಿ 8.80 ಲಕ್ಷ ರೂ. ಮೌಲ್ಯದ ಬಂಗಾರ ಮತ್ತು ಬೆಳ್ಳಿ ಆಭರಣ ಜಪ್ತಿ ಮಾಡಿದ್ದಾರೆ ಎಸ್ಪಿ ಅಡ್ಡೂರು ಶ್ರೀನಿವಾಸಲು ಮಾಹಿತಿ ನೀಡಿದರು.

ಕಾಳಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ 8 ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಿ 119 ಗ್ರಾಂ. ಬಂಗಾರದ ಒಡವೆ, 85 ಗ್ರಾಂ. ಬೆಳ್ಳಿ ಆಭರಣ, 28 ಸಾವಿರ ರೂ. ನಗದು ಸೇರಿ 18.46 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ. ಈ 8 ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆಳಂದ ತಾಲೂಕಿನ ಕಾವ್ಸು ರನಾಯಕ ತಾಂಡಾದ ಅಪ್ಪಾಜಿ ಗಂಗಾರಾಮು ಚವ್ಹಾಣ್ (22), ಹೊನ್ನಳ್ಳಿ ತಾಂಡಾದ ಮಿಥುನ್ ಲಕ್ಷ್ಮಣ ಚವ್ಹಾಣ್ (23) ಎಂಬುವವರನ್ನು ಬಂಧಿಸಲಾಗಿದೆ. ಇವರು ರಾತ್ರಿ ವೇಳೆ ಬೀಗ ಹಾಕಿದ ಮನೆಗಳನ್ನು ಟಾರ್ಗೆಟ್ ಮಾಡಿ ಕಳ್ಳತನ ಮಾಡುತ್ತಿದ್ದರು ಎಂದರು.

ನರೋಣಾ ಮತ್ತು ಕಮಲಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರೈತರ ಹೊಲಗಳಲ್ಲಿ ಕಟ್ಟಿದ್ದ ಒಂದು ಖಿಲಾರಿ ಹೆಣ್ಣು ಕರು, ಎರಡು ದೇವಣಿ ಹೋರಿಗಳು ಸೇರಿ ಒಟ್ಟು 1.15 ಲಕ್ಷ ರೂ. ಮೌಲ್ಯದ ಮೌಲ್ಯದ ಜಾನುವಾರುಗಳನ್ನು ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಶರಣಪ್ಪ ಬೇನೂರ, ಫಾರುಕ ಖುರೇಶಿ ಮತ್ತು ರಬ್ಬಾನಿ ಅತ್ತಾರ ಎಂಬುವರನ್ನು ಬಂಧಿಸಿ ಅವರಿಂದ ಜಾನುವಾರು ಮಾರಾಟ ಮಾಡಿ ಬಂದ ಒಟ್ಟು 2.15 ಲಕ್ಷ ರೂ. ನಗದು ಮತ್ತು ಕಳ್ಳತನಕ್ಕೆ ಬಳಸುತ್ತಿದ್ದ ಸುಮಾರು 2 ಲಕ್ಷ ರೂ. ಮೌಲ್ಯದ ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ಶಹಾಬಾದ್ ಡಿವೈಎಸ್‌ಪಿ ಶಂಕರಗೌಡ ಪಾಟೀಲ, ಶಹಾಬಾದ ಸಿಪಿಐ ಎಸ್.ಸಿ.ಪಾಟೀಲ, ಆಳಂದ ಡಿವೈಎಸ್‌ಪಿ ತಮ್ಮರಾಯ ಪಾಟೀಲ, ಸಿಪಿಐ ಜಗದೀಶ ಕೆ.ಜಿ, ಕಾಳಗಿ ಸಿಪಿಐ ಜಗದೇವಪ್ಪ ಪಾಳಾ ಮತ್ತಿತ್ತರ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಇದ್ದರು.

ಎ.15 ರಿಂದ 17ರವರೆಗೆ ಹೀಟ್ ವೇವ್ ಆರೆಂಜ್ ಅಲರ್ಟ್ : ಮಧ್ಯಾಹ್ನ ಹೊರಹೋಗದಂತೆ ಡಿಸಿ ಸೂಚನೆ



ಕಲಬುರಗಿ,ಏ.14-

ಜಿಲ್ಲೆಯಾದ್ಯಂತ ಎ.15ರಿಂದ 17ರವರೆಗೆ ಬಿಸಿ ಗಾಳಿ ತೀವ್ರವಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆ ಹೀಟ್ ವೇವ್ ಆರೆಂಜ್ ಅಲರ್ಟ್ ನೀಡಿದೆ. ಈ ಹಿನ್ನೆಲೆ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಬಿ. ಫೌಝಿಯಾ ತರನ್ನುಮ್ ತಿಳಿಸಿದ್ದಾರೆ.

ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ಸಾಧ್ಯವಾದಷ್ಟು ಹೊರಗೆ ಹೋಗುವುದನ್ನು ತಪ್ಪಿಸಬೇಕು. ಅನಿವಾರ್ಯವಾಗಿ ಹೊರಗೆ ಹೋಗಬೇಕಾದರೆ ಛತ್ರಿ, ಟೋಪಿ, ಸನ್‌ಗ್ಲಾಸ್, ಪಾದರಕ್ಷೆಗಳನ್ನು ಬಳಸಬೇಕು. ಜೊತೆಗೆ ಸಾಕಷ್ಟು ನೀರನ್ನು ತೆಗೆದುಕೊಂಡು ಹೋಗುವಂತೆ ಸಲಹೆ ನೀಡಿದ್ದಾರೆ. ಹಗುರವಾದ, ತಿಳಿ ಬಣ್ಣದ ಹತ್ತಿ ಬಟ್ಟೆಗಳನ್ನು ಧರಿಸಬೇಕು. ತಾಪಮಾನ ಹೆಚ್ಚಿರುವ ಸಮಯದಲ್ಲಿ ಶ್ರಮದಾಯಕ ಕೆಲಸಗಳನ್ನು ತಪ್ಪಿಸಬೇಕು. ಬಾಯಾರಿಕೆ ಇಲ್ಲದಿದ್ದರೂ ಸಹ ನಿರಂತರವಾಗಿ ನೀರು ಕುಡಿಯುವುದು ಅಗತ್ಯ ಎಂದರು.

ಶಿಶುಗಳು, ವೃದ್ಧರು ಹಾಗೂ ದೀರ್ಘಕಾಲದ ಕಾಯಿಲೆ ಹೊಂದಿರುವವರು ಹೆಚ್ಚು ಎಚ್ಚರಿಕೆ ವಹಿಸಬೇಕು. ಬಿಸಿಲಿನಿಂದ ಮನೆಗೆ ಬಂದ ತಕ್ಷಣ ತಂಪಾದ ನೀರು ಕುಡಿಯುವುದನ್ನು ಹಾಗೂ ತಕ್ಷಣ ಎಸಿ/ಕೂಲರ್ ಬಳಸುವುದನ್ನು ತಪ್ಪಿಸಬೇಕು ಎಂದು ತಿಳಿಸಿದ್ದಾರೆ.

ಚಹಾ-ಕಾಫಿ ತ್ಯಜಿಸಿ, ಮಜ್ಜಿಗೆ ಸೇವನೆ ಮಾಡಿ :

ಬಿಸಿಲಿನ ಸಮಯದಲ್ಲಿ ದೇಹದ ನೀರಿನ ಅಂಶ ಕಡಿಮೆಯಾಗುವ ಸಾಧ್ಯತೆ ಇರುವುದರಿಂದ ಚಹಾ, ಕಾಫಿ, ಆಲ್ಕೋಹಾಲ್ ಹಾಗೂ ಕಾರ್ಬೋನೇಟೆಡ್ ಪಾನೀಯಗಳನ್ನು ತಪ್ಪಿಸಬೇಕು. ಬದಲಾಗಿ ಓಆರ್‌ಎಸ್, ಲಸ್ಸಿ , ಮಜ್ಜಿಗೆ, ನಿಂಬೆ ನೀರು, ತೋರಣಿ (ಅಕ್ಕಿ ನೀರು) ಸೇವಿಸುವುದು ಉತ್ತಮ ಎಂದು ಸಲಹೆ ನೀಡಿದ್ದಾರೆ.

ಏನು ಮಾಡಬೇಕು? : ತಂಪಾದ ಸ್ಥಳಗಳಲ್ಲಿ ಇರಬೇಕು, ಛತ್ರಿ, ಟೋಪಿ, ಹತ್ತಿ ಬಟ್ಟೆ ಬಳಸಬೇಕು, ಸಾಕಷ್ಟು ನೀರು ಕುಡಿಯಬೇಕು, ಬಿಸಿಲಿನ ಅವಧಿಯಲ್ಲಿ ವಿಶ್ರಾಂತಿ ಪಡೆಯಬೇಕು

ಏನು ಮಾಡಬಾರದು? : ನೇರ ಸೂರ್ಯ ಕಿರಣಕ್ಕೆ ದೇಹ ಒಡ್ಡಬಾರದು, ಕೊಡೆ ಇಲ್ಲದೆ ಹೊರಹೋಗಬಾರದು, ಗಾಢ ಬಣ್ಣದ ಅಥವಾ ಸಿಂಥೆಟಿಕ್ ಉಡುಪು ಧರಿಸಬಾರದು, ಬಿಸಿಲಿನಲ್ಲಿ ಶ್ರಮದಾಯಕ ಕೆಲಸ ಮಾಡಬಾರದು

ಜಾನುವಾರುಗಳಿಗೂ ಮುನ್ನೆಚ್ಚರಿಕೆ ಅಗತ್ಯ : ಜಾನುವಾರುಗಳನ್ನು ಮುಂಜಾನೆ ಹಾಗೂ ಸಂಜೆ ಮಾತ್ರ ಮೇಯಿಸಲು ಬಿಡಬೇಕು. ಮಧ್ಯಾಹ್ನ ನೆರಳಿನಲ್ಲಿ ಇರಿಸಿ, ದಿನಕ್ಕೆ 2-3 ಬಾರಿ ನೀರು ಕೊಡಬೇಕು. ನಿರ್ಜಲೀಕರಣ ತಪ್ಪಿಸಲು ಉಪ್ಪು, ಬೆಲ್ಲ, ಲಿಂಬೆ ಮಿಶ್ರಿತ ನೀರು ನೀಡುವುದು ಉತ್ತಮ ಎಂದು ಸೂಚಿಸಲಾಗಿದೆ.

ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ರೈತರು ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕೆಂದು ಜಿಲ್ಲಾಡಳಿತ ಮನವಿ ಮಾಡಿದೆ.

ಎಸ್‌ಸಿ-ಎಸ್‌ಟಿ ಮೀಸಲಾತಿ ಹೆಚ್ಚಳ ಜಾರಿಗೆ ಸಿಪಿಐ(ಎಂ) ಒತ್ತಾಯ



ಕಲಬುರಗಿ,ಏ.14-

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲಾತಿ ಪ್ರಮಾಣ ಹೆಚ್ಚಳ ಹಾಗೂ ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮುಖಂಡರು ನಗರದ ಲೋಕಸಭಾ ಸದಸ್ಯರ ಕಚೇರಿ ಎದುರು ಪ್ರತಿಭಟಿಸಿ, ಸಂಸದ ರಾಧಾಕೃಷ್ಣ ದೊಡ್ಡಮನಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಕನ್ನಡ ಭವನದಿಂದ ಸಂಸದರ ಕಚೇರಿವರೆಗೆ ಪ್ರತಿಭಟನಾ ರ್‍ಯಾಲಿ ನಡೆಸುವ ಮೂಲಕ ಅನೇಕ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು. ರಾಜ್ಯದಲ್ಲಿ ಎಸ್‌ಸಿ-ಎಸ್‌ಟಿ ಸಮುದಾಯಗಳ ಜನಸಂಖ್ಯೆ ಆಧಾರಿತ ಮೀಸಲಾತಿ ಹೆಚ್ಚಳ ಕುರಿತು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ನೇತೃತ್ವದ ಆಯೋಗವು ಕ್ರಮವಾಗಿ ಶೇ.17 ಮತ್ತು ಶೇ.7ಕ್ಕೆ ಮೀಸಲಾತಿ ಹೆಚ್ಚಳ ಮಾಡುವಂತೆ ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಅಂಗೀಕ ರಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿತ್ತು. ಆದರೆ ಈ ತೀರ್ಮಾನಕ್ಕೆ ಇನ್ನೂ ಕೇಂದ್ರದ ಅಂತಿಮ ಅನುಮೋದನೆ ಲಭ್ಯವಾಗಿಲ್ಲ. ಸಂವಿಧಾನದ 9ನೇ ಶೆಡ್ಯೂಲ್ ಗೆ ಸೇರಿಸುವ ಮೂಲಕ ಈ ಮೀಸಲಾತಿ ಜಾರಿಗೆ ತರಬೇಕಾಗಿದೆ ಎಂದು ಒತ್ತಾಯಿಸಿದರು.

ಸಾಮಾಜಿಕ ನ್ಯಾಯ ಸಾಧನೆಗಾಗಿ ಒಳ ಮೀಸಲಾತಿ ಅಗತ್ಯವಿದ್ದು, ದೇವಿಂದರ್ ಸಿಂಗ್ ವಿರುದ್ಧ ಪಂಜಾಬ್ ಪ್ರಕರಣ ತೀರ್ಪು ಇದಕ್ಕೆ ಪೂರಕವಾಗಿದೆ ಎಂದು ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೆ ಸೂಕ್ತ ಕ್ರಮಗಳನ್ನು ವಿಳಂಬಿಸದೆ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಸಿಪಿಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ನೀಲಾ, ಎಸ್‌ಸಿ-ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ತಕ್ಷಣ ಅನುಮೋದನೆ ನೀಡಬೇಕು, 9ನೇ ಶೆಡ್ಯೂಲ್ ಗೆ ಸೇರಿಸಬೇಕು ಎಂದು ಆಗ್ರಹಿಸಿದರು.

ದಲಿತರಿಗೆ ಹಕ್ಕುಗಳು ನೀಡುವ ಒಳಮೀಸಲಾತಿ ವಿಚಾರದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹಾಗೂ ಕೇಂದ್ರದಲ್ಲಿ ಉದ್ದೇಶಪೂರ್ವಕವಾಗಿ ವಿಳಂಬ ಧೋರಣೆ ತಾಳುತ್ತಿವೆ. ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಹಾಗೂ ಗುತ್ತಿಗೆ ಸಿಬ್ಬಂದಿಯನ್ನು ತೆಗೆದುಹಾಕಲು ಸರ್ಕಾರ ಯಾಕೆ ಹಿಂದೇಟು ಹಾಕುತ್ತಿದೆ ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಪ್ರಭು ಖಾನಾಪುರೆ, ಮೀನಾಕ್ಷಿ ಬಾಳಿ, ಸುಧಾಮ ಧನ್ನಿ, ಪದ್ಮಿನಿ ಕಿರಣಗಿ, ಪಾಂಡುರಂಗ ಮಾವಿನಕರ, ಶಾಂತಾ ಗಂಟೆ, ವಿರುಪಾಕ್ಷಪ್ಪ ತಡಕಲ್, ಸಾಬಮ್ಮ, ಚಂದಮ್ಮ ಗೋಳಾ, ಸಾಬಮ್ಮ ಎಂ.ಕಾಳಗಿ, ಗುರು ಚಂದಕವಠೆ, ನಾಗಪ್ಪ ರಾಯಚೂರಕರ, ಸೇರಿದಂತೆ ಹಲವರು ಇದ್ದರು.

ಸಮಾಜದಲ್ಲಿ ಸಮಾನತೆ ಸಾರಿದ ಬಸವ ತತ್ವವೇ ಶ್ರೇಷ್ಠ : ಶಾಸಕ ಬಿ.ಆರ್.ಪಾಟೀಲ್



ಚಿಂಚೋಳಿ,ಏ.14-

ಸಮಾಜದಲ್ಲಿ ಬೇರುಬಿಟ್ಟಿದ್ದ ಕೀಳು ಜಾತಿ ವ್ಯವಸ್ಥೆಯ ಅಂಕುಡೊಂಕುಗಳನ್ನು ಹೋಗಲಾಡಿಸಿ ಸಮಾನತೆ, ಮಾನವೀಯತೆ ಸಾರಿದ ಮಹತ್ವದ ತತ್ವವೇ ಬಸವ ತತ್ವ ಎಂದು ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ, ಆಳಂದ ಶಾಸಕ ಬಿ.ಆರ್.ಪಾಟೀಲ್ ಅಭಿಪ್ರಾಯಪಟ್ಟರು.

ಕಲಬುರಗಿ ಜಿಲ್ಲೆಯಲ್ಲಿ ಏ.19 ಮತ್ತು 20ರಂದು ನಡೆಯಲಿರುವ 893ನೇ ಬಸವ ಜಯಂತ್ಯೋತ್ಸವದ ಪೂರ್ವಭಾವಿ ಸಭೆವು ಚಿಂಚೋಳಿ ಪಟ್ಟಣದ ವೀರೇಂದ್ರ ಪಾಟೀಲ್ ಸಭಾಂಗಣದಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ಸಮಾಜದ ನಾಯಕರ ನೇತೃತ್ವದಲ್ಲಿ ಈ ಸಭೆಯಲ್ಲಿ ಮಾತನಾಡಿದರು.


ಇಂದಿನ ಸಮಾಜದಲ್ಲಿ ಬಸವಣ್ಣನವರ ಆಚಾರ-ವಿಚಾರಗಳು ಮರೆಯಾಗುತ್ತಿವೆ ಎಂಬ ಆತಂಕ ವ್ಯಕ್ತಪಡಿಸಿದ ಅವರು, ಮೊದಲು ನಾವು ಬಸವಣ್ಣನವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ನಂತರ ನಮ್ಮ ಮಕ್ಕಳಿಗೆ ಅವರ ವಚನಗಳು, ನಡೆ-ನುಡಿಗಳು ಮತ್ತು ಜೀವನ ಮೌಲ್ಯಗಳ ಅರಿವು ಮೂಡಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು.

ಲಿಂಗಾಯತ ಧರ್ಮವು ಎಲ್ಲಾ ವರ್ಗದ ಜನರಿಗೆ ಸಮಾನತೆ ನೀಡುವ ಧರ್ಮವಾಗಿದ್ದು, ಬಸವಣ್ಣನವರ ವಚನಗಳು ಮತ್ತು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಉದ್ದೇಶದಿಂದ ಬಸವ ಜಯಂತ್ಯೋತ್ಸವವನ್ನು ಆಚರಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಎ.19ರಂದು ಕಲಬುರಗಿಯಲ್ಲಿ ನಡೆಯುವ 893ನೇ ಬಸವ ಜಯಂತ್ಯೋತ್ಸವದಲ್ಲಿ ಚಿಂಚೋಳಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಸವ ಭಕ್ತರು ಸೇರಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಬಸವ ಜಯಂತ್ಯೋತ್ಸವ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಜಿ.ಪಾಟೀಲ, ಸುಭಾಷ ರಾಠೋಡ, ಅಖಿಲ ಭಾರತ ಮಹಾಸಭೆ ಜಿಲ್ಲಾ ಘಟಕ ಅಧ್ಯಕ್ಷ ಶರಣು ಮೋದಿ, ರವೀಂದ್ರ ಶಾಬಾದಿ, ಮಲ್ಲಿನಾಥ ಪಾಟೀಲ, ಬಾಬುರಾವ ಪಾಟೀಲ, ನಂದಿಕುಮಾರ ಪಾಟೀಲ, ಶರಣು ಪಾಟೀಲ್ ಮೋತ್ಕಪಳ್ಳಿ, ಮಲ್ಲಿಕಾರ್ಜುನ ಪಾಲಾಮೂರು, ವಿರೇಶ ಯಂಪಳ್ಳಿ, ಚಿತ್ರಶೇಖರ ಪಾಟೀಲ, ರಾಜಶೇಖರ, ನೀಲಕಂಠ ಶಿಲಿನ್, ದೀಪಕ ನಾಗಪೂಣ್ಯಶಟಿ, ಬಸವಣ್ಣ ಪಾಟೀಲ, ಜಗನ್ನಾಥ ಇದಾಲಾಯಿ, ಬಸವರಾಜ, ಶಂಕರ, ಸುರೇಶ್ ದೇಶಪಾಂಡೆ, ಅಮೃತರಾವ ಗುಡ್ಡದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಬುರಗಿ ಬಳಿ ಶರಣ ಶರಣೆಯರ ವಚನಮಂಟಪ : ಸಚಿವ ಪ್ರಿಯಾಂಕ್ ಖರ್ಗೆ



ಕಲಬುರಗಿ,ಏ.14-

ನಗರಕ್ಕೆ ಸಮೀಪವಿರುವ ಕಪನೂರು ಗ್ರಾಮದ ಬಳಿ 6.06 ಗುಂಟೆ ಪ್ರದೇಶದಲ್ಲಿ ಶರಣ-ಶರಣೆಯರ ಕುರಿತು ನೂತನ ವಚನಮಂಟಪವನ್ನು ರೂಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಸಂಬಂಧ ಬೆಂಗಳೂರಿನ ತಮ್ಮ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು ಉದ್ದೇಶಿತ ವಚನಮಂಟಪವು ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ವಚನಗಳು ಸೇರಿದಂತೆ ವಚನಕ್ರಾಂತಿಯಲ್ಲಿ ಭಾಗಿಗಳಾಗಿರುವ ಕನ್ನಡದ ಎಲ್ಲ ಶರಣ-ಶರಣೆಯರ ಚಿತ್ರಗಳು ಹಾಗೂ ಅವರ ವಚನಗಳನ್ನು ಹೊಂದಿರುತ್ತದೆ ಎಂದು ಮಾಹಿತಿ ನೀಡಿದ ಅವರು, ತೆರೆದ ಸಭಾಂಗಣವನ್ನು ಚರ್ಚೆ, ಉಪನ್ಯಾಸ, ಸಭೆಗಳನ್ನು ನಡೆಸುವಂತೆ ವಿನ್ಯಾಸಗೊಳಿಸಲಾಗುವುದು ಎಂದು ಹೇಳಿದರು.

ಕಲಬುರಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಹತ್ತಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಈಗಾಗಲೇ ಕಾಳಗಿ ಸೂರ್ಯನಾರಾಯಣ ದೇವಾಲಯ ಸಂರಕ್ಷಣಾ ಕಾಮಗಾರಿ, ಸೇಡಂ ತಾಲ್ಲೂಕಿನಲ್ಲಿನ ಪಾರಂಪರಿಕ ತಾಣವಾದ ಮಳಖೇಡ ಕೋಟೆಯ ಅಭಿವೃದ್ಧಿ ಕಾಮಗಾರಿ, ಚಿತ್ತಾಪುರ ತಾಲ್ಲೂಕಿನ ನಾಗಾವಿ ಪಾರಂಪರಿಕ ಪ್ರದೇಶದಲ್ಲಿರುವ ಪ್ರಾಚ್ಯ ಕುರುಹುಗಳ ಅಭಿವೃದ್ಧಿ, ಸಂರಕ್ಷಣಾ ಕಾಮಗಾರಿಗಳು ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸಿದ್ದು, ಈ ಕಾಮಗಾರಿಗಳ ಬಗ್ಗೆಯೂ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಇದರೊಂದಿಗೆ ಚಿತ್ತಾಪುರ ತಾಲ್ಲೂಕಿನಲ್ಲಿರುವ ಕನಗನಹಳ್ಳಿಯಲ್ಲಿನ ಐತಿಹಾಸಿಕ ಬೌದ್ಧನೆಲೆ ಮತ್ತು ಪ್ರಾಚ್ಯ ಕುರುಹುಗಳ ಅಭಿವೃದ್ಧಿ ಸಂರಕ್ಷಣಾ ಕಾಮಗಾರಿಯ ಬಗ್ಗೆಯೂ ಸಚಿವರು ಕೆಲವು ನಿರ್ದೇಶನಗಳನ್ನು ನೀಡಿದರು.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ತ್ರಿಲೋಕಚಂದ್ರ ಕೆ.ವಿ ಹಾಗೂ ಇತರ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.



ಜೇವರ್ಗಿಯಲ್ಲಿ ದಲಿತ ಪೌರಕಾರ್ಮಿಕರ ಧರಣಿ ತೀವ್ರ: ವೇತನ ಬಾಕಿ, ನೇಮಕಾತಿ ಸಮಸ್ಯೆ ವಿರುದ್ಧ ಆಕ್ರೋಶ

ಜೇವರ್ಗಿ,ಏ.14-

ದಲಿತ ಪೌರಕಾರ್ಮಿಕರ ಬಾಕಿ ವೇತನ ಹಾಗೂ ನೇಮಕಾತಿ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ಜೇವರ್ಗಿಯಲ್ಲಿ ನಡೆಯುತ್ತಿರುವ ಧರಣಿ ಸತ್ಯಾಗ್ರಹ ತೀವ್ರಗೊಂಡಿದ್ದು, ಕಾರ್ಮಿಕ ಸಂಘಟನೆ ಮುಖಂಡರು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪುರಸಭೆ ದಲಿತ ಪೌರಕಾರ್ಮಿಕರ ಸಂಘಟನೆಯ ಮುಖಂಡ ಮಹೇಶ್ ಕುಮಾರ್ ರಾಠೋಡ್ ಮಾತನಾಡಿ, ''ಇಲ್ಲಿನ ಶಾಸಕರು ದಲಿತ ಪೌರಕಾರ್ಮಿಕರು ಹಾಗೂ ದುಡಿಯುವ ವರ್ಗದ ಪರ ನಿಜವಾದ ಬದ್ಧತೆ ಹೊಂದಿದ್ದರೆ, ತಕ್ಷಣ ಧರಣಿ ಸ್ಥಳಕ್ಕೆ ಭೇಟಿ ನೀಡಿ ತಮ್ಮ ಕಾಳಜಿಯನ್ನು ತೋರಿಸಬೇಕು'' ಎಂದು ಒತ್ತಾಯಿಸಿದರು.

ಮುಂದುವರಿಸಿ, ಶಾಸಕರು, ತಹಶೀಲ್ದಾರ್ ಹಾಗೂ ಪುರಸಭೆಯ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸಮಸ್ಯೆ ಪರಿಹರಿಸಿ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು. ಇಲ್ಲವಾದರೆ ಹಂತ ಹಂತವಾಗಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಧರಣಿ ಸತ್ಯಾಗ್ರಹದಲ್ಲಿ ಪೌರಕಾರ್ಮಿಕರ ಸಂಘಟನೆ ಅಧ್ಯಕ್ಷೆ ಶಂಕರಮ್ಮ, ಕಾರ್ಯದರ್ಶಿ ರಾಘವೇಂದ್ರ, ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾ ಕಾರ್ಯದರ್ಶಿ ಮಹಮ್ಮದ್ ಚೌಧ್ರಿ ಕೊಡ್ಚಿ, ಜಿಲ್ಲಾ ಉಪಾಧ್ಯಕ್ಷ ಮಲ್ಲಿಕಾರ್ಜುನ ಕೆಲ್ಲೂರ್ ಮುಖಂಡರಾದ ರಾಜ ಪಟೇಲ್ ಯಳ್ವಾರ್, ಪೌರಕಾರ್ಮಿಕರಾದ ಗಂಗಮ್ಮ, ಶರಣಮ್ಮ, ದೊಡ್ಡಮ್ಮ, ದೇವಕಿ, ಶಾರದಬಾಯಿ ಸೇರಿದಂತೆ ಅನೇಕರು ನಿರಂತರ ಧರಣಿಯಲ್ಲಿ ಭಾಗಿಯಾಗಿದ್ದಾರೆ.

ವಿವಿಧ ಕಾಮಗಾರಿಗಳಿಗೆ ಶಾಸಕ ಸಿದ್ದು ಪಾಟೀಲ್ ಶಂಕುಸ್ಥಾಪನೆ



ಹುಮನಾಬಾದ್,ಏ.14-

ಪಟ್ಟಣದ ಬೀರಲಿಂಗೇಶ್ವರ್ ದೇವಸ್ಥಾನ ಸಮುದಾಯ ಭವನ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸಿದ್ದು ಪಾಟೀಲ್ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು.

ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಅನುದಾನದಡಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ''ಹುಮನಾಬಾದ್ ಪಟ್ಟಣಕ್ಕೆ 10 ಕೋಟಿ ರೂ.

ಅನುದಾನ ನೀಡುವುದಾಗಿ ಹೇಳಿದ್ದೆ. ಅದರಂತೆ ಕುರುಬ, ಕೋಲಿ, ಹೇಳುವ ಹಾಗೂ ಭೂವಿ ಸಮಾಜಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಒದಗಿಸಲಾಗಿದೆ'' ಎಂದು ತಿಳಿಸಿದರು.

ಪಟ್ಟಣದಲ್ಲಿ ಜಾತಿ ತಾರತಮ್ಯವಿಲ್ಲದೆ ಎಲ್ಲ ಸಮುದಾಯಗಳು ಒಂದಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಸಂತೋಷಕರ ಸಂಗತಿ. ಎಲ್ಲಾ ವರ್ಗಗಳ ಅಭಿವೃದ್ಧಿಗೆ ನಾನು ಬದ್ಧನಾಗಿದ್ದೇನೆ ಎಂದರು.

ಸರ್ಕಾರದ ಅನುದಾನ ಹಂಚಿಕೆ ಕುರಿತು ಆರೋಪಿಸಿದ ಅವರು, ''ಸಿದ್ದರಾಮಯ್ಯ ಸರ್ಕಾರ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಿಗೆ 50 ಕೋಟಿ ರೂ. ನೀಡುತ್ತಿದ್ದರೆ, ಬಿಜೆಪಿ ಮತ್ತು ಜೆಡಿಎಸ್ ಶಾಸಕರಿರುವ ಕ್ಷೇತ್ರಗಳಿಗೆ 2530 ಕೋಟಿ ರೂ. ಮಾತ್ರ ನೀಡುತ್ತಿದೆ'' ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಅನುದಾನ ನೀಡಲಾಗುತ್ತಿದೆ. ಹಾಲುಮತ ಸಮಾಜದ ಬಹುಕಾಲದ ಬೇಡಿಕೆ ಈಡೇರಿದ್ದು ಸಂತೋಷದ ವಿಷಯವಾಗಿದೆ ಎಂದರು.

ಹಿಂದೆ ಜಾಗದ ಸಮಸ್ಯೆಯಿಂದ ಬಜೆಟ್ ಮಂಜೂರು ಸಾಧ್ಯವಾಗಿರಲಿಲ್ಲ. ಆದರೆ ಈಗ ಸಿಎಂ ಅನುದಾನದಲ್ಲಿ 1 ಕೋಟಿ ರೂ. ಬಿಡುಗಡೆಯಾಗಿದ್ದು, ಕಾಮಗಾರಿ ಶೀಘ್ರ ಆರಂಭವಾಗಬೇಕು ಎಂದು ಅವರು ವಿನಂತಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಸಂತೋಷ್ ಪಾಟೀಲ್, ಸಮಾಜದ ಮುಖಂಡರಾದ ಸತೀಶ್ ರಾಂಪುರೆ, ಶಿವರಾಜ್ ಚೀನಕೇರಿ, ಅಶೋಕ್ ಸೊಂಡೆ, ವಿನಾಯಕ್ ಮಣಕೋಜಿ, ಸಂಜೀವಕುಮಾರ್ ವಡ್ಡನಕೇರಾ, ಶಿವಕುಮಾರ್ ಬೆಳಕೇರಿ, ಉಮೇಶ್ ದಾಡಗಿ ಹಾಗೂ ಸಚಿನ್ ಕಲ್ಲೂರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಬಿಹಾರದ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ : ನಾಳೆಯೇ ಪ್ರಮಾಣವಚನ ಸ್ವೀಕಾರ

ಮಾಂಝಿ ಅವರ ಬಣ ಸೇರಿದ್ದರು. ಅದಾದ ಬಳಿಕ ಅವರು 2018 ರಲ್ಲಿ ಬಿಜೆಪಿಗೆ ಸೇರಿದ್ದರು.

2019 ರಲ್ಲಿ ಬಿಜೆಪಿ ಅವರನ್ನು ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿತು. ಅದೇ ವರ್ಷ ಅವರು ಎಂಎಲ್‌ಸಿಯಾಗಿ ನೇಮಕಗೊಂಡರು. 2023 ರಲ್ಲಿ ಅವರು ಬಿಹಾರ ಬಿಜೆಪಿಯ ರಾಜ್ಯ ಅಧ್ಯಕ್ಷರಾಗಿ ಆಯ್ಕೆ ಆದರು. 2024 ರಲ್ಲಿ ಅವರನ್ನು ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರನ್ನಾಗಿ ನೇಮಿಸಲಾಯಿತು. 2025 ರಲ್ಲಿ ತಾರಾಪುರದಿಂದ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ಉಪಮುಖ್ಯಮಂತ್ರಿಯಾದರು.

ಬಿಹಾರದಲ್ಲಿ ಮೊದಲ ಬಾರಿಗೆ ಬಿಜೆಪಿ ಸಿಎಂ: ಬಿಹಾರ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿಯಿಂದ ಸಾಮ್ರಾಟ್ ಚೌಧರಿ ಮೊದಲ ಸಿಎಂ ಆಗಲಿದ್ದಾರೆ. ಅವರ ಆಯ್ಕೆಗೆ ಅಭಿನಂದಿಸಿ ಪೋಸ್ಟ್ ಮಾಡಿರುವ ಉಪೇಂದ್ರ ಕುಶ್ವಾಹ್, ಬಿಹಾರ ಸಿಎಂ ಆಗಿ ಹೊಸ ಜವಾಬ್ದಾರಿ ಹೊತ್ತಿರುವ ಸಾಮ್ರಾಟ್ ಚೌದರಿ ಅವರಿಗೆ ಧನ್ಯವಾದಗಳು ಎಂದು ತಿಳಿಸಿದ್ದಾರೆ. ಬಿಹಾರ ನೂತನ ಸಿಎಂ ಆಗಿ ಆಯ್ಕೆಯಾಗಿರುವ ಚೌಧರಿ ನಾಳೆ ಅಂದರೆ ಬುಧವಾರ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ.

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅದ್ದೂರಿ ಆಚರಣೆ

ಸಂವಿಧಾನವೇ ಮಾನವಕುಲಕ್ಕೆ ಒಂದೇ ಗ್ರಂಥ ಶಾಸಕ ಶಿವರಾಜ್ ಪಾಟೀಲ್

ಅನ್ಯಾಯಗಳನ್ನು ಗುರುತಿಸಿದಷ್ಟೇ ಅಲ್ಲದೆ ಭವಿಷ್ಯದ ಆರ್ಥಿಕ, ಸಾಮಾಜಿಕ ಹಾಗೂ ಲಿಂಗ ತಾರತಮ್ಯಗಳನ್ನು ಮುಂಚಿತವಾಗಿ ಕಂಡ ದೂರದೃಷ್ಟಿಯ ನಾಯಕರು ಎಂದು ಹೇಳಿದರು. ಸಂವಿಧಾನ ಸ್ವೀಕರಿಸಿದ ನಂತರವೂ ಸಾಮಾಜಿಕ ಹಾಗೂ ರಾಜಕೀಯ ಅಸಮಾನತೆ ಮುಂದುವರಿದಿರುವುದು ವಿಷಾದನೀಯ. ವ್ಯಕ್ತಿಗೌರವ ನಿರ್ಮಾಣವಾಗಬೇಕು, ಲಿಂಗತಾರತಮ್ಯ ಮುಕ್ತ ಸಮಾಜ ನಿರ್ಮಾಣವಾಗಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ರಾಯಚೂರು ನಗರ ಕ್ಷೇತ್ರದ ಶಾಸಕ ಡಾ. ಎಸ್. ಶಿವರಾಜ್ ಪಾಟೀಲ್ ಮಾತನಾಡಿ, ದೇಶದಲ್ಲಿ ಒಂದೊಂದು ಧರ್ಮಗಳಿಗೆ ಒಂದೊಂದು ಗ್ರಂಥವಿದ್ದರೆ ಮಾನವ ಕುಲಕ್ಕೆ ಒಂದೇ ಗ್ರಂಥ, ಅದು ಸಂವಿಧಾನ ಎಂದು ಹೇಳಿದರು. ಯಾವುದೇ ಅಧಿಕಾರಿ ಎಷ್ಟೇ ಉನ್ನತ ಹುದ್ದೆ ಹೊಂದಿದ್ದರೂ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸಬೇಕು. ಸಮಾಜದ ವಿದ್ಯಾರ್ಥಿಗಳು ಶಿಕ್ಷಣ ಪಡೆದು ಉನ್ನತ ಹುದ್ದೆಗೇರಬೇಕು ಎಂದು ಆಶಿಸಿದರು. ಸಮಾನತೆ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಅಂಬೇಡ್ಕರ್ ನಡೆಸಿದ ಹೋರಾಟ ಇಂದಿಗೂ ಮಾರ್ಗದರ್ಶಕವಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಸು ಗಿರಿ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ, ಸಹಾಯಕ ಆಯುಕ್ತ ಡಾ. ಹಂಪಣ್ಣ ಸಜ್ಜನ್, ತಹಶೀಲ್ದಾರ್ ಸುರೇಶ್ ವರ್ಮಾ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರವೀಣ್ ಕುಮಾರ್, ಚಂದ್ರಶೇಖರ್ ಪವಾರ್, ರಾಜೇಂದ್ರ ಜಲ್ದಾರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ವೇದಿಕೆಯಲ್ಲಿ ಆಗಮಿಸಿದ ಗಣ್ಯರಿಗೆ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಪ್ರವೀಣ್ ಕುಮಾರ್ ಕೆ.ಜಿ.ಎಸ್. ಸ್ವಾಗತ ಕೋರಿದರು. ಕಾರ್ಯಕ್ರಮದ ಆರಂಭದಲ್ಲಿ ನಾಡಗೀತೆ ಹಾಗೂ ಪೀಠಿಕೆ ಓದುವ ಮೂಲಕ ಆರಂಭಿಸಲಾಯಿತು. ಬಳಿಕ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ 135ನೇ ಜನ್ಮ ದಿನಾಚರಣೆ

ವಿವಿಧ ಗಣ್ಯರಿಂದ ಮಾಲಾರ್ಪಣೆ, ಮೆರವಣಿಗೆಗೆ ಚಾಲನೆ

ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ, ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನವೀನ್ ಕುಮಾರ್, ಮುಖಂಡರಾರ ರವಿ ಭೋಸರಾಜು, ರವೀಂದ್ರ ಜಲ್ದಾರ್, ಕೆ.ಇ.ಕುಮಾರ್, ಮಾರಪ್ಪ, ನರಸಪ್ಪ ದಡೋರ್, ಎಂ.ಈರಣ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜ ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.

ಪ.ಪಂಚಾಯತಿಯಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಆಚರಣೆ

ಅಂಬೇಡ್ಕರ್ ದೇಶದ ಆಸ್ತಿ - ಹಾಜಿಚೌದ್ರಿ

ಮಾತನಾಡಿ ಅಂಬೇಡ್ಕರ್ ಅವರು ದೇಶ ಕಂಡ ಮಹಾನ್ ಮಾನವತಾವಾದಿ, ಕೊನೆ ಉಸಿರಿನವರೆಗೂ ದೀನ ದಲಿತರ ಏಳಿಗೆಯನ್ನೇ ಜೀವನದ ಗುರಿಯನ್ನಾಗಿಸಿಕೊಂಡಿದ್ದ ಮಹಾ ಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟದ ಬದುಕು ಅನುಸರಣೀಯ ಎಂದರು. ಈ ಸಂದರ್ಭದಲ್ಲಿ ಉಪಾದ್ಯಕ್ಷೆ ಲಕ್ಷ್ಮೀ ಆದೇಪ್ಪ, ಮಾಜಿ ಅದ್ಯಕ್ಷ ವೈ.ಭೂಪನಗೌಡ, ಸದಸ್ಯರಾದ ಕೃಷ್ಣನಾಯಕ, ಹಸೇನ ಅಲಿಸಾಬ್, ಮಾರ್ಕಪ್ಪ, ಸೂರಿ ದುರುಗಣ್ಣನಾಯಕ, ಅಜೀತ್ ಕುಮಾರ ಹೊನ್ನಟಗಿ, ಮೌಲಾಸಾಬ ವರ್ಚಸ್, ಮುಖಂಡರಾದ ಗ್ಯಾನಪ್ಪ, ಬಸವರಾಜ ಸಾಹುಕಾರ, ಮಲ್ಲಪ್ಪ, ಬಂದೇನವಾಜ್, ನಾಗರಾಜ, ವಿನಯ್,ಅಬ್ರಾಹಂ ಹೊನ್ನಟಗಿ, ಮಲ್ಲಪ್ಪ ಎನ್, ಜಯಪ್ಪ, ಎಂ.ಮನೋಹರ್, ಮಾಜಿ ಉಪಾದ್ಯಕ್ಷ ಚನ್ನಪ್ಪ ಗಡ್ಲ, ಪತ್ರಕರ್ತ ಸಂಘದ ಅದ್ಯಕ್ಷ ಹನುಮೇಶ, ಸದಸ್ಯ ವಿಜಯಕುಮಾರ, ದ.ಸಾ.ಪ ಅದ್ಯಕ್ಷ ಪಾರ್ಥ, ರಾಮು ಗಿಂಡಿ,ಚಂದ್ರಶೇಖರ ಹಡಪದ್, ರಾಜು ಬೋವಿ. ಸಮುದಾಯ ಸಂಘಟನೆ ಅದಿಕಾರಿ ಹಂಪಯ್ಯ ಪಾಟೀಲ್, ಜೆಇ ಹುಸೇನ ಸಾಬ್, ಸಿಬ್ಬಂದಿಗಳಾದ ಚಾಂದಪಾಷ, ನಂದಕುಮಾರ ಸೇರಿದಂತೆ ಇನ್ನಿತರರು ಇದ್ದರು.

ಸಿರವಾರ ನೀರಾವರಿ ಇಲಾಖೆಯ ಅಧಿಕಾರಿಗಳ ಮೇಲೆ ಆರೋಪ ಸುಳ್ಳು ರೈತರಿಂದ ಮನವಿ

ಏಜೆನ್ಸಿ ಇರುತ್ತದೆ. ಸರ್ಕಾರದ ನಿಯಮಗಳನ್ನು ಪಾಲನೆಗೆ ಅಡಿಪಡಿಸುವ ಸಂಘಟನೆಗಳಿಗೆ ಮಾಹಿತಿ ಕೊರತೆ, ಅವರು ಹೇಳಿದ್ದು ಸರಿ, ಅವರು ಮಾಡಿದ್ದು ಮಾನದಂಡ ಎಂದು ಹೇಳುವುದು ಇದು ಎಲ್ಲಿ ಇಲ್ಲ, ಇದರಿಂದ, ಜಿಲ್ಲೆಯಲ್ಲಿ ನೀರಾವರಿ ಇಲಾಖೆಯ ಅನೇಕ ಹುದ್ದೆಗಳಿಗೆ ಅಧಿಕಾರಿಗಳು ಬರುತ್ತಿಲ್ಲ, ಇದು ಅಧಿಕಾರಿಗಳಿಗೆ ಕಿರುಕುಳ ನೀಡುವ ಕೆಲಸವಾಗಿದೆ. ಸರ್ಕಾರದ ಹಣ ಭ್ರಷ್ಟಾಚಾರ ಆಗಿದ್ದರೆ, ಇಲಾಖೆಯ ತನಿಖೆಯ ಆಧಾರದ ಮೇಲೆ ಕಾನೂನು ಕ್ರಮವಾಗಲಿ, ಅದು ಬಿಟ್ಟು ನೇರವಾಗಿ ಜಾತಿ ನಿಂದನೆ, ಪ್ರಕರಣ ದಾಖಲು ಮಾಡುವಂತೆ ಪೋಲಿಸ್ ಅಧಿಕಾರಿಗಳಿಗೆ ಒತ್ತಡ ಮಾಡುವುದು ಯಾಕೆ ಎಂದು ಅನೇಕ ಪ್ರಶ್ನೆಗಳನ್ನು ಹಾಕಿದರು. ಸಂಘಟನೆ ನೆಪದಲ್ಲಿ ಕೆಲಸ ಮಾಡದ ಕಾವಲುಗಾರರಿಗೆ ಸಂಘಟನೆ ಮಾಡುವಂತವರನ್ನು ಕೆಲಸದಿಂದ ಕೈಬಿಟ್ಟ ಹೊಸ ಕಾರ್ಮಿಕರಿಗೆ ಕೆಲಸ ನೀಡುವ ಮೂಲಕ ರೈತರ ಹೊಲ ಗದ್ದೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಉಮಾಪತಿ, ಸೋಮಯ್ಯ, ಜಯರಾಮು, ಗಂಗಪ್ಪ ಹಳ್ಳಿಹೊಸೂರ, ಕುಬೇರಪ್ಪ, ಶಿವಕುಮಾರ್, ರಾಜಪ್ಪಗೌಡ, ಅಮರೇಶ ಸೇರಿದಂತೆ ಅನೇಕರು ನೂರಾರು ರೈತರು ಒತ್ತಾಯಿಸಿದರು.

ಹಟ್ಟಿಯಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಸಂಘದಿಂದ ರಕ್ತದಾನ ಶಿಬಿರ

ಹಟ್ಟಿ,ಏ.13-

ಹಟ್ಟಿ ಚಿನ್ನದ ಗಣಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಮ್ ಜಯಂತಿಯ ಅಂಗವಾಗಿ ರಕ್ತದಾನ ಶಿಬಿರವನ್ನು ಹಟ್ಟಿಯಲ್ಲಿ ಆಯೋಜಿಸಲಾಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಮುಖಂಡರು, ರಕ್ತದಾನವು ಜೀವ ಉಳಿಸುವ ಮಹತ್ತರ ಸೇವೆ ಯಾಗಿದ್ದು, ಪ್ರತಿಯೊಬ್ಬರೂ ರಕ್ತದಾನದ ಮಹತ್ವವನ್ನು ಅರಿತು ಸಮಾಜಮುಖಿಯಾಗಿ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಮಹಾನಾಯಕರ ಆದರ್ಶಗಳನ್ನು ಅನುಸರಿಸುವುದರ ಮೂಲಕ ಸಮಾಜದಲ್ಲಿ ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸ'ಬೇಕು ಎಂದು ಹೇಳಿದರು.

ಶಿಬಿರದಲ್ಲಿ ನೌಕರರು, ಯುವಕರು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿ ರಕ್ತದಾನ ಮಾಡಿದರು. ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವೂ ನಡೆಯಿತು. ಇದೇ ಸಂದರ್ಭದಲ್ಲಿ ಕೆಲ ಗಣ್ಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಶಫಿ, ಎಸ್ಸಿ , ಎಸ್ಟಿ ನೌಕರರ ಸಂಘದ ಅಧ್ಯಕ್ಷ ಜಮದಗ್ನಿ, ಕಾರ್ಯದರ್ಶಿ ಶರಣಗೌಡ ಗುರಿಕಾರ, ಕಾರ್ಮಿಕ ಮುಖಂಡರಾದ ಗೌಸ್ ಮಿಯಾ, ಹನುಮಂತಗೌಡ, ಕುಪ್ಪಣ್ಣ, ಬಾಬು, ಗ್ಯಾನಪ್ಪ ಪೆಂಚಲಮ್ಮ, ಮೌನೇಶ ಸೇರಿದಂತೆ ಸಂಘದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ನಾರಿ ಶಕ್ತಿ ವಂದನ ಮಸೂದೆ ಹಿನ್ನೆಲೆ ಮಹಿಳಾ ಹಕ್ಕುಗಳ ಜಾಗೃತಿ ಕಾರ್ಯಕ್ರಮ : ಸುರಭಿ ಹೊಡಿಗೆರೆ



ಕಲಬುರಗಿ,ಏ.14-

ಮಹಿಳಾ ಮೀಸಲಾತಿ ಜಾರಿಗೆ ಸಂಬಂಧಿಸಿ ಏ.16ರಿಂದ 18ರವರೆಗೆ ವಿಶೇಷ ಸಂಸತ್ ಅಧಿವೇಶನ ನಡೆಯಲಿದ್ದು, ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮುಂದಿನ 10 ದಿನಗಳಲ್ಲಿ ಮಹಿಳೆಯರಲ್ಲಿ ಹಕ್ಕುಗಳ ಬಗ್ಗೆ ಹೆಚ್ಚಿನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ರಾಜ್ಯ ವಕ್ತಾರೆ ಸುರಭಿ ಹೊಡಿಗೆರೆ ತಿಳಿಸಿದ್ದಾರೆ.

ನಗರದ ಪತ್ರಿಕಾಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಮಸೂದೆಯನ್ನು ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲಿಸಬೇಕು. ವಿವಿಧ ಕ್ಷೇತ್ರಗಳ ತಜ್ಞ ಮಹಿಳೆಯರನ್ನು ಗುರುತಿಸಿ ಮುಂದಿನ ದಿನಗಳಲ್ಲಿ ಅವರಿಗೆ ರಾಜಕೀಯ ಅವಕಾಶಗಳು ಸಿಗಲಿವೆ ಎಂದ ಅವರು, ಮಹಿಳಾ ಮೀಸಲಾತಿ ಜಾರಿಗೆ ಶ್ರಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ತಿಳಿಸಿದರು.

ಮಹಿಳಾ ಮೀಸಲಾತಿ ಹಲವು ವರ್ಷಗಳಿಂದಲೂ ಕೇಳಿಬರುತ್ತಿದ್ದ ಬೇಡಿಕೆಯಾಗಿದ್ದು, ಅದರ ಜಾರಿಗೆ ಹಲವು ಬಾರಿ ಅಡಚಣೆ ಉಂಟಾಗಿತ್ತು. ಸುಮಾರು 15 ವರ್ಷಗಳ ಹಿಂದೆ ಸಂಸತ್ತಿನಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಕೆಲ ರಾಜಕೀಯ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ನಂತರ ಮಸೂದೆ ಮುಂದುವರಿಯದೆ ಉಳಿದಿತ್ತು. ಇದೀಗ ಶೀಘ್ರದಲ್ಲೇ ಕೇಂದ್ರ ಸರ್ಕಾರ ಅನುಷ್ಠಾನಕ್ಕೆ ತರಲಿದೆ ಎಂದು ಹೇಳಿದರು.

ಯುಪಿಎ ಸರ್ಕಾರದ 10 ವರ್ಷದ ಆಡಳಿತಾವಧಿಯಲ್ಲಿ ಮಸೂದೆಯನ್ನು ಮುಂದಕ್ಕೆ ತರಲಾಗಲಿಲ್ಲ ಎಂದು ಆರೋಪಿಸಿದ ಅವರು, ಮೋದಿ ಸರ್ಕಾರದ ಅವಧಿಯಲ್ಲಿ ಮಹಿಳಾ ಸಬಲೀಕರಣಕ್ಕೆ ಶಿಕ್ಷಣ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಸುರಭಿ ಹೊದಿಗೆರೆ, ''ಕಾಂಗ್ರೆಸ್ ಹಳದಿ ಗ್ಲಾಸ್ ಹಾಕಿಕೊಂಡಿದೆ. ಅವರಿಗೆ ಎಲ್ಲದರಲ್ಲೂ ಚುನಾವಣೆ ಮಾತ್ರ ಕಾಣುತ್ತಿದೆ'' ಎಂದು ಟೀಕಿಸಿದ ಅವರು, ಇಂದಿರಾ ಗಾಂಧಿ ಮತ್ತು ಸೋನಿಯಾ ಗಾಂಧಿ ನೇತೃತ್ವದ ಅವಧಿಯಲ್ಲಿ ಮಹಿಳಾ ಮೀಸಲಾತಿ ಕುರಿತು ಸ್ಪಷ್ಟ ಕ್ರಮ ಕೈಗೊಳ್ಳಲಾಗಲಿಲ್ಲ ಎಂದು ಹೇಳಿದರು.

ಬಿಜೆಪಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಗೌರಿ ಚುಚಕೋಟಿ ಮಾತನಾಡಿ, ನಾರಿ ಶಕ್ತಿ ವಂದನ್ ಮಸೂದೆಗೆ ಬೆಂಬಲವಾಗಿ ಮಹಿಳಾ ಸಮಾವೇಶಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಲಲಿತಾ ಅನಪೂರ, ಜಿಲ್ಲಾ ಉಪಾಧ್ಯಕ್ಷೆ ಸಂತೋಷಿರಾಣಿ ಪಾಟೀಲ್ ತೆಲ್ಲೂರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮುಂಬೈ.ಬೆಂಗಳೂರು ವಂದೇ ಭಾರತ್ ಸ್ಲೀಪರ್ ರೈಲು ಕಲಬುರಗಿ ಮಾರ್ಗವಾಗಿ ಸಂಚಾರ



ಕಲಬುರಗಿ,ಏ.14-

ಮುಂಬೈ ಬೆಂಗಳೂರು ನಡುವಿನ ವಂದೇ ಭಾರತ ಸ್ಲೀಪರ್ ರೈಲು ಕಲಬುರಗಿ ಮಾರ್ಗವಾಗಿ ಸಂಚರಿಸಲಿರುವ ಮಹತ್ವದ ನಿರ್ಧಾರಕ್ಕೆ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಹರ್ಷ ವ್ಯಕ್ತಪಡಿಸಿದೆ.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇತ್ತೀಚೆಗೆ ಮುಂಬೈ ಬೆಂಗಳೂರು ನಡುವೆ ವಂದೇ ಭಾರತ ಸ್ಲೀಪರ್ ರೈಲು ಆರಂಭಿಸುವುದಾಗಿ ಘೋಷಿಸಿದ್ದರೂ, ಮಾರ್ಗದ ಬಗ್ಗೆ ಸ್ಪಷ್ಟತೆ ಇಲ್ಲದ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಗೊಂದಲ ಉಂಟಾಗಿತ್ತು.

ಕಲಬುರಗಿಬೆಂಗಳೂರು ನಡುವೆ ವೇಗವಾದ ರೈಲು ಸಂಪರ್ಕ ಕಲ್ಪಿಸುವುದು ಈ ಭಾಗದ ಜನರ ದೀರ್ಘಕಾಲದ ಬೇಡಿಕೆಯಾಗಿದ್ದು, ಈ ಕುರಿತು ಕೆಕೆಸಿಸಿಐ ಹಲವು ಬಾರಿ ಕೇಂದ್ರ ರೈಲ್ವೆ ಸಚಿವಾಲಯದ ಗಮನ ಸೆಳೆದಿತ್ತು.

ಈ ಸಂಬಂಧ 2025 ಡಿಸೆಂಬರ್ 17ರಂದು ಕೆಕೆಸಿಸಿಐ ನಿಯೋಗ ದೆಹಲಿಯಲ್ಲಿ ರೈಲ್ವೆ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತ್ತು. ಬಳಿಕ 2026 ಏಪ್ರಿಲ್ 8ರಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ಹೊಸ ರೈಲು ಸೇವೆ ಆರಂಭಿಸುವಂತೆ ಒತ್ತಾಯಿಸಿತ್ತು.

ಇದೀಗ ಏಪ್ರಿಲ್ 13ರಂದು ಪ್ರಹ್ಲಾದ್ ಜೋಶಿ ಅವರು ಕೆಕೆಸಿಸಿಐ ಅಧ್ಯಕ್ಷ ಶರಣಬಸಪ್ಪ ಎಂ. ಪಪ್ಪಾ ಅವರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿ, ಮುಂಬೈಬೆಂಗಳೂರು ವಂದೇ ಭಾರತ ಸ್ಲೀಪರ್ ರೈಲು ಕಲಬುರಗಿ ಮಾರ್ಗವಾಗಿ ಸಂಚರಿಸಲಿದೆ ಎಂದು ತಿಳಿಸಿದ್ದಾರೆ.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ರೈಲ್ವೆ ಸಚಿವ ವಿ. ಸೋಮಣ್ಣ ಹಾಗೂ ಪ್ರಹ್ಲಾದ್ ಜೋಶಿ ಸೇರಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಈ ಬೆಳವಣಿಗೆಯನ್ನು ಐತಿಹಾಸಿಕ ಸಾಧನೆ ಎಂದು ಕೆಕೆಸಿಸಿಐ ಪರಿಗಣಿಸಿದ್ದು, ಮುಂಬೈಕಲಬುರಗಿಬೆಂಗಳೂರು ಸಂಪರ್ಕ ಬಲಗೊಳ್ಳಲಿದೆ. ಇದರಿಂದ ವ್ಯಾಪಾರ, ಕೈಗಾರಿಕೆ, ಉದ್ಯಮಗಳಿಗೆ ಉತ್ತೇಜನ ದೊರೆಯಲಿದ್ದು, ಪ್ರಯಾಣಿಕರಿಗೆ ವೇಗವಾದ ಹಾಗೂ ಸುಗಮ ಸಂಚಾರ ಸಾಧ್ಯವಾಗಲಿದೆ. ಜೊತೆಗೆ ಕಲ್ಯಾಣ ಕರ್ನಾಟಕ ಭಾಗದ ಆರ್ಥಿಕ ಅಭಿವೃದ್ಧಿಗೂ ಇದು ಮಹತ್ವದ ಉತ್ತೇಜನ ನೀಡಲಿದೆ ಎಂದು ಮಂಡಳಿ ವಿಶ್ವಾಸ ವ್ಯಕ್ತಪಡಿಸಿದೆ.



ದಾಸಪುರದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಅಡಿಗಲ್ಲು: ಶಾಸಕ ಬಿ.ಎಂ.ನಾಗರಾಜ ಚಾಲನೆ

ಸಿರುಗುಪ್ಪ,ಏ.14-

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) 2025-26ನೇ ಯೋಜನೆಯಡಿ 30 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಬಿ.ಎಂ. ನಾಗರಾಜ ಅಡಿಗಲ್ಲು ನೆರವೇರಿಸಿದರು.

ತಾಲೂಕಿನ ದಾಸಪುರ ಗ್ರಾಮದಲ್ಲಿ ಸಿರಿಗೇರಿ ಮಲ್ಲಪ್ಪನ ಮನೆಯಿಂದ ತಳವಾರ ರೇಣುಕಮ್ಮನ ಮನೆಯವರೆಗೆ ಹಾಗೂ ಟಿ. ದ್ಯಾವಣ್ಣ ಮನೆಯಿಂದ ತಳವಾರ ಮಲ್ಲಯ್ಯನ ಮನೆಯವರೆಗೆ ಸಿಸಿ ರಸ್ತೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಮುಖಂಡರಾದ ಕೊಂಚಿಗೇರಿ ಸಿದ್ದನಗೌಡ, ದಾಸಪುರ ಶೇಖರಪ್ಪ, ಬಸವರಾಜ, ರುದ್ರಪ್ಪ, ಹನುಮಂತಪ್ಪ, ಬುಳ್ಳಪ್ಪ, ದೊಡ್ಡ ಮುದುಕನಗೌಡ, ವೀರಭದ್ರಗೌಡ, ಡಿ. ನಾಗಪ್ಪ, ಮುದ್ದು ವೀರಪ್ಪ, ಸಣ್ಣ ಮುದುಕನಗೌಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಜಿಲ್ಲಾ ಪಂಚಾಯತ್ ರಾಜ್ ಎಇಇ ಇಂಜಿನಿಯರ್ ತಿಪ್ಪೇಸ್ವಾಮಿ, ಬಿ. ವೆಂಕಟೇಶ್, ಹೆಚ್. ಗಣೇಶ್, ಟಿ.ಸಿ. ಮೋಹನ್, ಬಿ.ಎಂ. ಮಣಿಕಂಠ ನಾಯಕ್ ಸೇರಿದಂತೆ ಅಧಿಕಾರಿಗಳು, ಗ್ರಾಮಸ್ಥರು, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.



ಮಹಾಪುರುಷರ ಜಯಂತಿಯಲ್ಲಿ ಶಾಂತತೆ ಕಾಪಾಡಿ : ಸಿಪಿಐ ಹನುಮರೆಡ್ಡೆಪ್ಪ

ಭಾಲ್ಕಿ,ಏ.14-

ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಮಹಾತ್ಮ ಬಸವೇಶ್ವರ ಅವರ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಮದ್ಯ ನಿಷೇಧ ಜಾರಿ ಮಾಡಿ, ಶಾಂತಿ ಕಾಪಾಡಿಕೊಳ್ಳಬೇಕು ಎಂದು ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ಹನುಮರೆಡ್ಡೆಪ್ಪ ತಿಳಿಸಿದ್ದಾರೆ. ಪಟ್ಟಣದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಬಸವಣ್ಣ ಜಯಂತಿ ನಿಮಿತ್ತ ಅಬಕಾರಿ ಇಲಾಖೆಯ ಸಹಯೋಗದಲ್ಲಿ ನಡೆದ ಶಾಂತಿ ಸಭೆಯಲ್ಲಿ ಅವರು ಮಾತನಾಡಿದರು. ಮಹಾಪುರುಷರ ಜಯಂತಿ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸುವ ಉದ್ದೇಶದಿಂದ ವೈನ್‌ಶಾಪ್, ಧಾಬಾ ಹಾಗೂ ಹೋಟೆಲ್ ಮಾಲಿಕರ ಸಭೆ ಕರೆಯಲಾಗಿದೆ. ಎಲ್ಲಾ ಅಂಗಡಿಗಳು ಮತ್ತು ಹೋಟೆಲ್‌ಗಳು ಪ್ರತಿದಿನ ರಾತ್ರಿ 10 ಗಂಟೆಯವರೆಗೆ ಮಾತ್ರ ತೆರೆಯಬೇಕು. ನಂತರ ಕಡ್ಡಾಯವಾಗಿ ಮುಚ್ಚಬೇಕು ಎಂದು ಸೂಚನೆ ನೀಡಿದರು. ಧಾಬಾಗಳಲ್ಲಿ ಮದ್ಯಪಾನಕ್ಕೆ ಅವಕಾಶ ನೀಡಬಾರದು. ಎಲ್ಲಾ ಹೋಟೆಲ್‌ಗಳಲ್ಲಿ ಸಿಸಿಟಿವಿ ಅಳವಡಿಕೆ ಕಡ್ಡಾಯವಾಗಿದ್ದು, ನಿಯಮ ಉಲ್ಲಂಘಿಸಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ ಎಂದು ಎಚ್ಚರಿಸಿದರು. ಒಟ್ಟಾರೆ ಜಯಂತಿ ಸಮಯದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮೀಣ ಠಾಣೆಯ ಪಿಎಸ್ಐ ಅಶೋಕ್ ಪಾಟೀಲ್, ಮೆಹಕರ್ ಪೊಲೀಸ್ ಠಾಣೆಯ ಪಿಎಸ್ಐ ಸುದರ್ಶನ್ ರೆಡ್ಡಿ, ಖಟಕಚಿಂಚೋಳಿ ಠಾಣೆಯ ಪಿಎಸ್ಐ ಪ್ರಭಾಕರ್ ಪಾಟೀಲ್, ಧನ್ನೂರ್ ಠಾಣೆಯ ಪಿಎಸ್ಐ ರಾಜಕುಮಾರ್ ಜಾಮಗೊಂಡ್ ಸೇರಿದಂತೆ ಇತರರು ಇದ್ದರು.

ಬಸವ ಜಯಂತಿ ಯಶಸ್ವಿಗೊಳಿಸಲು ಬಿ.ಆರ್.ಪಾಟೀಲ್ ಕರೆ



ಸೇಡಂ,ಏ.14-

ಕಲಬುರಗಿಯಲ್ಲಿ ಆಯೋಜಿಸಲಾಗಿರುವ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರ 893ನೇ ಜಯಂತ್ಯೋತ್ಸವವನ್ನು ಅತ್ಯಂತ ವೈಭವದಿಂದ ಮತ್ತು ಯಶಸ್ವಿಯಾಗಿ ಆಚರಿಸಲು ಸರ್ವ ಸಮಾಜದ ಬಸವಾಭಿಮಾನಿಗಳು ಕೈಜೋಡಿಸಬೇಕು ಎಂದು ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷ ಬಿ.ಆರ್.ಪಾಟೀಲ್ ಕರೆ ನೀಡಿದರು.

ಸೇಡಂ ಪಟ್ಟಣದ ಪ್ರಸಿದ್ಧ ಶ್ರೀ ಕೊತ್ತಲ ಬಸವೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಜಯಂತ್ಯೋತ್ಸವದ ಪೂರ್ವಭಾವಿ ಸಭೆಯಲ್ಲಿ ಬಸವ ಜಯಂತಿಯ ಪ್ರಚಾರ ಕರಪತ್ರಗಳನ್ನು ಗಣ್ಯರ ಸಮ್ಮುಖದಲ್ಲಿ ಬಿಡುಗಡೆ ಮಾಡಿ ಮಾತನಾಡಿದರು.

ಏ.19 ಮತ್ತು 20 ಎರಡು ದಿನಗಳ ಕಾಲ ಕಲಬುರಗಿಯ ಜಗತ್ ವೃತ್ತದ ಶ್ರೀ ಬಸವೇಶ್ವರ ಪುತ್ಥಳಿ ಆವರಣದಲ್ಲಿ ಬಹಿರಂಗ ಸಭೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.


ಬಸವಣ್ಣನವರ ವಿಚಾರಧಾರೆಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ. ಈ ಉತ್ಸವವು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ, ಬಸವಾದಿ ಶರಣರ ತತ್ವದಲ್ಲಿ ನಂಬಿಕೆಯುಳ್ಳ ಎಲ್ಲಾ ಸಮುದಾಯದವರು ಮತ್ತು ಹಿರಿಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ಕೊತ್ತಲ ಬಸವೇಶ್ವರ ದೇವಾಲಯದ ಶ್ರೀ ಸದಾಶಿವ ಮಹಾಸ್ವಾಮಿಗಳು ಹಾಗೂ ಹಾಲಪ್ಪಯ್ಯ ವಿರಕ್ತ ಮಠದ ಶ್ರೀ ಪಂಚಾಕ್ಷರ ಮಹಾಸ್ವಾಮಿಗಳು, ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ, ಜಯಂತ್ಯೋತ್ಸವ ಸಮಿತಿಯ ಕಾರ್ಯದರ್ಶಿ ಬಿ.ಜಿ.ಪಾಟೀಲ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಶರಣು ಮೋದಿ, ತಾಲೂಕಾಧ್ಯಕ್ಷ ರಾಜಶೇಖರ ನಿಲಂಗಿ, ಅಮರನಾಥ ಪಾಟೀಲ, ರವೀಂದ್ರ ಶಹಬಾದಿ, ಶಿವಕುಮಾರ ಪಾಟೀಲ ತೆಲ್ಕೂರ, ಶಿವಕುಮಾರ ಬೋಳಶೆಟ್ಟಿ, ಸಿದ್ದಣ್ಣ ಶೆಟ್ಟಿ ಸೇರಿದಂತೆ ನೂರಾರು ಬಸವಭಿಮಾನಿಗಳು ಭಾಗವಹಿಸಿದ್ದರು.

ಜುಮ್ಮಾ ಮಸೀದಿ ಅಭಿವೃದ್ಧಿಗೆ 20 ಲಕ್ಷ ರೂ. ಮಂಜೂರು : ಶಾಸಕರಿಂದ ಕಾಮಗಾರಿ ಪರಿಶೀಲನೆ

ಸಿರುಗುಪ್ಪ,ಏ.14-

ತಾಲೂಕಿನ ಶಾನವಾಸಪುರ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಇಲಾಖೆಯ ಅನುದಾನದಡಿ ಜುಮ್ಮಾ ಮಸೀದಿ ಅಭಿವೃದ್ಧಿಗೆ 20 ಲಕ್ಷ ರೂ. ಮಂಜೂರು ಮಾಡಲಾಗಿದ್ದು, ಶಾಸಕ ಬಿ.ಎಂ. ನಾಗರಾಜ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಈ ವೇಳೆ ಕಾಮಗಾರಿಯ ಪ್ರಗತಿ ಕುರಿತು ಮಾಹಿತಿ ಪಡೆದ ಅವರು, ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದು ಸೂಚಿಸಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಕುಮಾರ್ ರಾಜೇಗೌಡ, ಅಕ್ಬರ್ ಸಾಬ್, ಬಳಿಗೇರು ಪೀರಾ ಸಾಬ್, ಚೀಣಿಗಿ ಸಾಬ್, ಟಿ. ಬಾಷಾ, ಟಿ. ಶೇಖ್ ಸಾಬ್, ಇಸ್ಮಾಯಿಲ್ ಸಾಬ್, ಜಿಲಾನ್ ಸಾಬ್, ಅಬ್ದುಲ್ ನಬಿ, ನಾಗರಾಜ, ಶರಣಗೌಡ, ನೀಲಕಂಠಗೌಡ, ಹೆಚ್. ಗಣೇಶ್, ಟಿ.ಸಿ. ಮೋಹನ್, ಬಿ.ಎಂ. ಮಣಿಕಂಠ ನಾಯಕ್ ಸೇರಿದಂತೆ ಗ್ರಾಮಸ್ಥರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಸಮರಕ್ಕೂ ಮುನ್ನ ಶಸ್ತ್ರತ್ಯಾಗ ಮಾಡಿದರೇ ದಳಪತಿ ವಿಜಯ್?

ಆಳುವ ಡಿಎಂಕೆ ಪಕ್ಷದ ಸೈದ್ಧಾಂತಿಕ ನಿಲುವನ್ನೇ ವಿಜಯ್ ಪ್ರತಿಪಾದಿಸುತ್ತಿರುವುದು- ತಮಿಳುನಾಡಿನ ಜನಕ್ಕೆ ಭಿನ್ನವಾಗಿ ಕಾಣುತ್ತಿಲ್ಲ. ಜಾತಿ ರಾಜಕಾರಣ, ಚುನಾವಣಾ ಭ್ರಷ್ಟಾಚಾರ- ವಿಜಯ್ ಅಂಕೆಗೂ ಸಿಗುತ್ತಿಲ್ಲ. ಚುನಾವಣೆ ಹತ್ತಿರವಾದಂತೆಲ್ಲ ಇದು ದಳಪತಿ ವಿಜಯ್ ಅರಿವಿಗೂ ಬಂದಿರಬಹುದು.

ಪಕ್ಕದ ತಮಿಳುನಾಡು ಚುನಾವಣೆಗೆ ಕೇವಲ ಒಂದು ವಾರ ಬಾಕಿ ಇದೆ. ಬಿರು ಬಿಸಿಲಿಗೇ ಕಾವೇರಿಸುವಂತೆ ಬಿರುಸಿನ ಪ್ರಚಾರ ನಡೆಯುತ್ತಿದೆ. ಮತದಾರರನ್ನು ಓಲೈಸುವ ಕೊನೆ ಹಂತದ ಕಸರತ್ತು ಬಿರುಸು ಪಡೆಯುತ್ತಿದೆ. ಇಂತಹ ನಿರ್ಣಾಯಕ ಘಟ್ಟದಲ್ಲಿ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಅಧ್ಯಕ್ಷ ದಳಪತಿ ವಿಜಯ್, ತಮ್ಮ ಹಲವು ಚುನಾವಣಾ ರ್ಯಾಲಿಗಳನ್ನು ದಿಢೀರ್ ರದ್ದು ಮಾಡಿದ್ದಾರೆ. ಚುನಾವಣಾ ಆಯೋಗದಿಂದ ಅನುಮತಿ ಸಿಕ್ಕಿದ್ದರೂ ವಿಲ್ಲಿವಾಕ್ಕಂ, ತಿರುವಳ್ಳೂರು, ಚೆನ್ನೈನ ಟಿ.ನಗರದಲ್ಲಿ ನಡೆಯಬೇಕಿದ್ದ ಚುನಾವಣೆ ರ್ಯಾಲಿಗಳನ್ನು ರದ್ದು ಪಡಿಸಲಾಗಿದೆ.

ಇದು ತಮಿಳುನಾಡಿನ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಯ ವಸ್ತುವಾಗಿದೆ. ವಿಜಯ್ ಅವರ ಈ ರಾಜಕೀಯ ನಡೆ, ಅವರ ವಿರೋಧಿಗಳಲ್ಲಿ ಕುತೂಹಲ ಕೆರಳಿಸಿದೆ. ಸೋಲು-ಗೆಲುವಿನ ಲೆಕ್ಕಾಚಾರಕ್ಕೆ ಹಚ್ಚಿದೆ. ಡಿಎಂಕೆ ನಾಯಕರಿಗೆ ವರ್ಕ್ ಫ್ರಂ ಹೋಮ್ ಪ್ರಚಾರವೆಂಬ ಗೇಲಿಯ ವಸ್ತುವಾಗಿ ಬಳಕೆಯಾಗುತ್ತಿದೆ.

ಮತ್ತೊಂದೆಡೆ, ಸಭೆಗಳು ರದ್ದಾಗುತ್ತಿರುವುದರಿಂದ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಿದೆ. ಟಿವಿಕೆ ಪಕ್ಷದ ಅಭ್ಯರ್ಥಿಗಳು ಕಂಗಾಲಾಗಿ, ವಿಜಯ್ ಅಲಭ್ಯತೆ ತುಂಬಿಕೊಳ್ಳಲು ಹೊಸ ಹಾದಿ ಹಿಡಿದಿದ್ದಾರೆ. ತಿರುವೇರುಂಬೂರ್ ಅಭ್ಯರ್ಥಿ ವಿಜಯ್ ಅವರ ಕಟೌಟ್ ಬಳಸಿ ಪ್ರಚಾರ ಮಾಡುತ್ತಿದ್ದರೆ; ಕೊಳತ್ತೂರು ಅಭ್ಯರ್ಥಿ ವಿಜಯ್ ಅವರಂತೆ ಕಾಣುವ ವ್ಯಕ್ತಿಯನ್ನು ಕರೆಸಿ ಮತಯಾಚನೆ ಮಾಡುತ್ತಿದ್ದಾರೆ. ಕಳೆದ ವರ್ಷ ಕರೂರ್‌ನಲ್ಲಿ ಸಾರ್ವಜನಿಕ ರ್ಯಾಲಿಯಲ್ಲಿ ಕಾಲ್ತುಳಿತ ಸಂಭವಿಸಿ 41 ಜನರು ಸಾವನ್ನಪ್ಪಿದ್ದನ್ನು, ಅದು ಈಗಲೂ ಸಿಬಿಐ ವಿಚಾರಣೆಗೊಳಪಡುತ್ತಿರುವುದನ್ನು ನೆನಪಿಸುತ್ತ, ಈ ದುರಂತದ ನಂತರ ವಿಜಯ್ ಸಾರ್ವಜನಿಕ ಸಭೆಗಳ ಬಗ್ಗೆ ಅತ್ಯಂತ ಎಚ್ಚರಿಕೆ ವಹಿಸುತ್ತಿದ್ದಾರೆ ಎಂದು ಸಮಜಾಯಿಷಿ ನೀಡುತ್ತಿದ್ದಾರೆ.

ತಮಿಳುನಾಡಿನ ಜನಜೀವನವನ್ನು, ಭಾಷಾಭಿಮಾನವನ್ನು, ಅತಿರೇಕಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅಲ್ಲಿನ ಜನರ ನರನಾಡಿಗಳಲ್ಲಿ ಸಿನೆಮಾ ಬೆರೆತುಹೋಗಿರುವುದಕ್ಕೆ ಪುರಾವೆ ಸಿಗುತ್ತದೆ. ಚಿತ್ರರಂಗದ ನಟನಟಿಯರು ನಾಯಕರಾಗಿ ಹೊರಹೊಮ್ಮಿರುವುದು, ರಾಜಕಾರಣಕ್ಕೆ ಬಂದು ರಾಜ್ಯವಾಳಿರುವುದು ಎದ್ದು ಕಾಣುತ್ತದೆ. 10 ವರ್ಷ ಮುಖ್ಯಮಂತ್ರಿಯಾಗಿ ಮೆರೆದ ಜನಪ್ರಿಯ ಚಿತ್ರನಟ ಎಂಜಿಆರ್ ತಮಿಳರ ಆರಾಧ್ಯದೈವವೇ ಆಗಿಹೋಗಿದ್ದಾರೆ. ಹಾಗೆಯೇ 14 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಳಿದ ಚಿತ್ರನಟಿ ಜಯಲಲಿತಾ ತಮಿಳರ ಅಮ್ಮನಾಗಿ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದ್ದಾರೆ. ಇವರಿಬ್ಬರಿಗೂ ಮೊದಲೇ ಸಿನೆಮಾ ಕ್ಷೇತ್ರದಿಂದ ರಾಜಕಾರಣಕ್ಕಿಳಿದು, 19 ವರ್ಷಗಳ ಕಾಲ ತಮಿಳುನಾಡನ್ನು ಆಳಿದ ಕರುಣಾನಿಧಿ, ಶೂದ್ರ ಸಂಕೇತವಾಗಿ-ದ್ರಾವಿಡ ಅಸ್ಮಿತೆಯಾಗಿ ಅಜರಾಮರರಾಗಿದ್ದಾರೆ.

ಇವರೆಲ್ಲರೂ ತಮಿಳರ ಅಂತರಂಗವನ್ನು ಅರಿತಿದ್ದರು. ಜನರೊಂದಿಗೇ ಬೆರೆತು ಬದುಕಿದವರು. ಜನನಾಯಕರೆನಿಸಿಕೊಂಡವರು. ಕರುಣಾನಿಧಿಯವರ ಒರಟು ವರ್ತನೆಯ ಕಾರಣಕ್ಕೆ ರಕ್ಷಾಕವಚ ತೊಟ್ಟು, ಸುರಕ್ಷಿತ ವಲಯದಲ್ಲಿ ಮಾತ್ರ ಕಾಣಿಸಿಕೊಂಡರೂ, ಜಯಲಲಿತಾ ಕೂಡ ತಮಿಳರ ಅಮ್ಮನ ಪಟ್ಟವನ್ನು ಅಲಂಕರಿಸಿದವರು. ಆದರೆ, ಅದೇ ಮಾತುಗಳನ್ನು, ಅದೇ ಸಿನೆಮಾ ಕ್ಷೇತ್ರದಿಂದ ಬಂದ ವಿಜಯಕಾಂತ್, ಕಮಲಾಹಾಸನ್ ಮತ್ತು ರಜನೀಕಾಂತ್‌ರಿಗೆ ಹೇಳಲಾಗುವುದಿಲ್ಲ. ಇವರೆಲ್ಲರೂ ಅಪಾರ ಅಭಿಮಾನಿಗಳನ್ನು ಹೊಂದಿದ್ದರೂ, ತಮಿಳರ ಹೃದಯದಲ್ಲಿ ಹಾಲು-ನೀರಿನಂತೆ ಬೆರೆತವರಲ್ಲ. ಇವತ್ತಿನ ಚುನಾವಣಾ ರಾಜಕಾರಣ ಈ ನಾಯಕರ ಆಕ್ಷನ್-ಕಟ್ ಸಿನೆಮಾದಂತಲ್ಲ. ಅಭಿಮಾನಿಗಳು ಮತದಾರರಾಗಿ ಬದಲಾಗುವುದಿಲ್ಲ. ಅದಕ್ಕಾಗಿಯೇ ಇವರು ರಾಜಕಾರಣದಲ್ಲಿ ಏಗುವುದು, ಅಧಿಕಾರಕ್ಕೇರುವುದು ಸಾಧ್ಯವಾಗಲಿಲ್ಲ.

ಈ ಮಾತಿಗೆ ಪೂರಕವಾಗಿ ಕಳೆದ ಭಾನುವಾರ ಕನ್ಯಾಕುಮಾರಿಯಲ್ಲಿ ನಡೆದ ದಳಪತಿ ವಿಜಯ್ ಅವರ ರೋಡ್ ಶೋನಲ್ಲಿ ನಡೆದ ಅಭಿಮಾನಿ ಮತ್ತು ಹೂವಿನ ಬಾಂಬ್ ಪ್ರಕರಣವನ್ನು ನೋಡಬಹುದು. ರಸ್ತೆಯ ಇಕ್ಕೆಲಗಳಲ್ಲಿ ಅಭಿಮಾನಿಗಳು ನಿಂತಿದ್ದರು. ಬಿಗಿ ಬಂದೋಬಸ್ತ್‌ನಲ್ಲಿ ನಟ ವಿಜಯ್ ಸೈಕಲ್ ಏರಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಅಭಿಮಾನಿಗಳತ್ತ ಕೈ ಬೀಸುತ್ತಿದ್ದರು. ಎಲ್ಲವೂ ಸಿನೆಮಾ ಶೈಲಿಯಲ್ಲಿಯೇ ನಡೆಯುತ್ತಿತ್ತು, ಕ್ಯಾಮರಾದಲ್ಲಿ ಸೆರೆಯಾಗುತ್ತಿತ್ತು. ಆಗ ಇದ್ದಕ್ಕಿದ್ದಂತೆ ಒಬ್ಬ ಅಭಿಮಾನಿ, ಆ ಬಿಗಿ ಬಂದೋಬಸ್ತನ್ನೂ ದಾಟಿ ಬಂದು ಸೈಕಲ್ ಮೇಲೆ ಬರುತ್ತಿದ್ದ ನಟ ವಿಜಯ್ ಮೇಲೆ ಹೂವಿನ ಚೆಂಡೊಂದನ್ನು ಎಸೆದರು. ಅಷ್ಟಕ್ಕೇ ಗಾಬರಿಬಿದ್ದ ವಿಜಯ್ ಸೈಕಲನ್ನು ಅಲ್ಲಿಯೇ ಬಿಟ್ಟು, ಹಿಂದೆ ಬರುತ್ತಿದ್ದ ಕ್ಯಾರವಾನ್ ಏರಿಬಿಟ್ಟರು.

ಈ ವಿಡಿಯೋ ತುಣುಕು ತಮಿಳುನಾಡಿನಾದ್ಯಂತ ಈಗ ವೈರಲ್ ಆಗುತ್ತಿದೆ. ಪರದೆಯ ಮೇಲೆ ನೂರಾರು ಜನರನ್ನು ಚಚ್ಚಿ ಬಿಸಾಕಿದ ಹೀರೋ, ಈಗ ಜೀವಭಯದಿಂದ ಓಡಿದ್ದು ಲೇವಡಿಗೆ ಒಳಗಾಗುತ್ತಿದೆ. ಈತ ಜನನಾಯಕನೇ ಎಂಬ ಅನುಮಾನಕ್ಕೆ ಕಾರಣವಾಗಿದೆ. ಚರ್ಚೆಗಳಾಗುತ್ತಿವೆ.

ತಮಿಳುನಾಡಿನ ರಾಜಕೀಯ ಇತಿಹಾಸವನ್ನು ಗಮನಿಸಿದರೆ- ಕರುಣಾನಿಧಿ, ಎಂಜಿಆರ್, ಜಯಲಲಿತಾ ಅವರು ಭ್ರಷ್ಟರಾದರೂ, ದುರಾಡಳಿತವಿದ್ದರೂ ಶೂದ್ರ ಸಂಕೇತ, ದ್ರಾವಿಡ ಅಸ್ಮಿತೆಯಾಗಿ ಜನಮಾನಸದಲ್ಲಿ ನೆಲೆಯೂರಿದವರು. ಆದರೆ ದಳಪತಿ ವಿಜಯ್, ರಾಜಕಾರಣಕ್ಕೆ ಅಡಿಯಿಡುವಾಗ ಆ ರೀತಿ ಗಟ್ಟಿಯಾದ ಸೈದ್ಧಾಂತಿಕ ನಿಲುವು-ಧೋರಣೆಗಳ ಸಿದ್ಧತೆಯನ್ನು ಮಾಡಿಕೊಳ್ಳಲಿಲ್ಲ. ಕಾರ್ಯಕರ್ತರನ್ನು ಸಿದ್ಧಗೊಳಿಸಲಿಲ್ಲ. ಜೊತೆಗೆ ಭಯಕ್ಕೆ ಬಿದ್ದ ಡಿಎಂಕೆ ಮತ್ತು ಬಿಜೆಪಿ- ಕೊನೆಯ ಚಿತ್ರಕ್ಕೆ ಸೆನ್ಸಾರ್ ಸರ್ಟಿಫಿಕೇಟ್ ಸಿಗದಂತೆ ಮತ್ತು ಕರೂರು ಕಾಲ್ತುಳಿತದ ವಿಚಾರಣೆಯಲ್ಲಿ ವ್ಯಸ್ತರಾಗುವಂತೆ ನೋಡಿಕೊಂಡರು. ಅವರ ರಾಜಕಾರಣವನ್ನು ವಿಜಯ್ ಕೂಡ ಅರಿಯದಾದರು. ವಿಜಯ್, ರಾಜಕೀಯಕ್ಕಾಗಿ ಹಿಂದಿ ಹೇರಿಕೆಯನ್ನು ಅತ್ಯುಗ್ರವಾಗಿ ವಿರೋಧಿಸುತ್ತಾರೆ. ಒಕ್ಕೂಟ ವ್ಯವಸ್ಥೆಯ ಪರವಿದ್ದು, ಮೋದಿಯವರ ತಾರತಮ್ಯ ನೀತಿಯನ್ನು ಟೀಕಿಸುತ್ತಾರೆ. ಆದರೆ ಬಿಜೆಪಿ-ಆರ್‌ಎಸ್‌ಎಸ್‌ನ ಹಿಂದುತ್ವ ರಾಜಕಾರಣವನ್ನು ಅರಿಯಲು ವಿಫಲರಾಗಿದ್ದಾರೆ.

ಅವರ ಹಿನ್ನಡೆಗೆ ಮತ್ತೊಂದು ಮುಖ್ಯ ಕಾರಣವೆಂದರೆ, ಹಿಂದಿ ಹೇರಿಕೆ, ಒಕ್ಕೂಟ ವ್ಯವಸ್ಥೆಯ ಪರವಿದ್ದು ಕೇಂದ್ರದ ತಾರತಮ್ಯ ನೀತಿಯ ವಿರುದ್ಧ ಸೆಟೆದು ನಿಲ್ಲುವುದನ್ನು ಆಡಳಿತಾರೂಢ ಡಿಎಂಕೆ ಸರ್ಕಾರವೇ ಸಮರ್ಥವಾಗಿ ನಿರ್ವಹಿಸುತ್ತಿದೆ. ಆಳುವ ಪಕ್ಷದ ಸೈದ್ಧಾಂತಿಕ ನಿಲುವನ್ನೇ ವಿಜಯ್ ಪ್ರತಿಪಾದಿಸುತ್ತಿರುವುದು- ತಮಿಳುನಾಡಿನ ಜನಕ್ಕೆ ಭಿನ್ನವಾಗಿ ಕಾಣುತ್ತಿಲ್ಲ. ಹೋದಲ್ಲಿ ಬಂದಲ್ಲಿ ಜನ ಸೇರುತ್ತಾರೆ- ಅಭಿಮಾನಿಗಳನ್ನು ಮತದಾರರನ್ನಾಗಿ ಪರಿವರ್ತಿಸಲಾಗುತ್ತಿಲ್ಲ. ಜಾತಿ ರಾಜಕಾರಣ, ಚುನಾವಣಾ ಭ್ರಷ್ಟಾಚಾರ- ವಿಜಯ್ ಅಂಕೆಗೂ ಸಿಗುತ್ತಿಲ್ಲ.

ಚುನಾವಣೆ ಹತ್ತಿರವಾದಂತೆಲ್ಲ ಇದು ದಳಪತಿ ವಿಜಯ್ ಅರಿವಿಗೂ ಬಂದಿರಬಹುದು. ರಾಜಕಾರಣ ಸಿನೆಮಾದಂತಲ್ಲ ಎನ್ನುವುದು ಅರ್ಥವಾಗಿರಬಹುದು. ಹಾಗಾಗಿ ಚುನಾವಣಾ ರ್ಯಾಲಿಗಳನ್ನು ರದ್ದು ಮಾಡುತ್ತಿದ್ದಾರೆ. ಅಭಿಮಾನಿಗಳ ಹೂವಿನ ಚೆಂಡನ್ನು ಕೂಡ ಬಾಂಬ್‌ನಂತೆ ಭ್ರಮಿಸಿ ಓಡುತ್ತಿದ್ದಾರೆ. ಇದು ಸಮರಕ್ಕೂ ಮುನ್ನವೇ ಶಸ್ತ್ರತ್ಯಾಗದಂತೆ ಕಂಡರೆ ಆಶ್ಚರ್ಯವಿಲ್ಲ.

ಪರಿಶಿಷ್ಟರು, ಅಸ್ಪೃಶ್ಯರು ಹಿಂದೂಗಳಲ್ಲ; ಬಾಬಾ ಸಾಹೇಬರು ಪ್ರತಿಪಾದಿಸಿದ್ದು ಹೀಗೆ...



ಗುಲಾಮನಿಗೆ ಅವನು ಗುಲಾಮನೆಂದು ನೆನಪಿಸಿ, ಆಗ ಅವನು ಬಂಡೇಳುತ್ತಾನೆ ಎಂಬ ಅವರ ಮಾತುಗಳೇ ಸಾಕು, ಇಂದಿಗೂ ಅನ್ಯರ ಕೃಪಾಕಟಾಕ್ಷದಡಿ ಗುಲಾಮರಂತೆ ಬದುಕುತ್ತಿರುವವರ ಸುಪ್ತಪ್ರಜ್ಞೆಯನ್ನು ಬಡಿದೆಬ್ಬಿಸಲು. ಯಾರು ಪರರ ಹಂಗಿನಲ್ಲಿ ಬದುಕುತ್ತಿದ್ದಾರೋ, ಅಂತಹವರ ಎದೆಯೊಳಗೆ ಈ ಮಾತುಗಳು ಕಿಚ್ಚು ಹಚ್ಚಬೇಕು.

ಆಧುನಿಕ ಭಾರತದ ಇತಿಹಾಸದಲ್ಲಿ ಮತ್ತೆ ಮತ್ತೆ ಉಲ್ಲೇಖಿಸಲ್ಪಟ್ಟಿರುವ ಹೆಸರು ಅಂಬೇಡ್ಕರ್. ಅವರ ಬದುಕು ಮತ್ತು ಬರೆಹಗಳು ಶತಮಾನಗಳಿಂದ ಬೇರೂರಿದ್ದ ಭಾರತದ ಸಾಂಪ್ರದಾಯಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿದವು. ಅವರು ತಮ್ಮ ಸುದೀರ್ಘ ಹೋರಾಟದಲ್ಲಿ ಪ್ರತಿಪಾದಿಸಿದ ಅತ್ಯಂತ ಕ್ರಾಂತಿಕಾರಿ ವಿಚಾರವೆಂದರೆ, ''ಹಿಂದೂ ಧರ್ಮ ಮತ್ತು ಪರಿಶಿಷ್ಟ ಜಾತಿಗಳು (ಅಸ್ಪೃಶ್ಯರು) ಎಂಬ ಎರಡು ಭಿನ್ನ ಅಸ್ತಿತ್ವಗಳು.'' ಅವರು ಈ ನಿಲುವು ತಳೆಯಲು ಕಾರಣವಾದ ಐತಿಹಾಸಿಕ, ಸಾಮಾಜಿಕ ಮತ್ತು ತಾತ್ವಿಕ ಕಾರಣಗಳನ್ನು ಅವಲೋಕಿಸುವುದು ಸರ್ವಕಾಲಕ್ಕೂ ಅಗತ್ಯ.

ಬಾಬಾ ಸಾಹೇಬರು ಹಿಂದೂ ಧರ್ಮವನ್ನು ವಿಶ್ಲೇಷಿಸುವಾಗ ಅದನ್ನು ಧರ್ಮ ಎನ್ನುವುದಕ್ಕಿಂತ ಹೆಚ್ಚಾಗಿ ಮನುಷ್ಯನ ಪ್ರತಿಯೊಂದು ಕ್ರಿಯೆಯನ್ನು ನಿರ್ಬಂಧಿಸುವ ನಿಯಮಗಳ ಸಂಕಲನ ಎಂದು ಕರೆದರು. ಅವರ ಪ್ರಕಾರ, ಹಿಂದೂ ಸಾಮಾಜಿಕ ವ್ಯವಸ್ಥೆ, ಶ್ರೇಣೀಕೃತ ಅಸಮಾನತೆ( )ಯ ಮೇಲೆ ನಿಂತಿದೆ. ಇಲ್ಲಿ ಸಮಾಜವು ಮೇಲು ಮತ್ತು ಕೀಳು ಎಂದು ವಿಭಜನೆಯಾಗದೆ, ಪ್ರತಿಯೊಂದು ಜಾತಿಯೂ ತನ್ನ ಮೇಲಿನ ಇನ್ನೊಂದು ಜಾತಿಯನ್ನು ದ್ವೇಷಿಸುವಂತೆ, ತನ್ನ ಕೆಳಗಿರುವ ಜಾತಿಗಿಂತ ತಾನು ಶ್ರೇಷ್ಠ ಎಂದು ಹೆಮ್ಮೆ ಪಡುವಂತೆ ಮಾಡಲಾಗಿದೆ. ಇಲ್ಲಿ ವ್ಯಕ್ತಿಯ ಜ್ಞಾನ ಅಥವಾ ಸಾಮರ್ಥ್ಯಕ್ಕೆ ಬೆಲೆಯಿಲ್ಲ. ಆತನ ಹುಟ್ಟು, ಸ್ಥಾನಮಾನ ಮತ್ತು ವೃತ್ತಿಯನ್ನು ನಿರ್ಧರಿಸುವ ಇದೊಂದು ಅಮಾನವೀಯ ಪದ್ಧತಿ. ಈ ವ್ಯವಸ್ಥೆಯು ಶೋಷಿತ ವರ್ಗಗಳು ಒಂದಾಗಿ ಅನ್ಯಾಯದ ವಿರುದ್ಧ ಹೋರಾಡದಂತೆ ತಡೆಯುವ ಒಂದು ತಾಂತ್ರಿಕ ಸಂಚು ಎನ್ನುತ್ತಾರವರು.

ಹಿಂದೂ ಧರ್ಮದ ವರ್ಣಾಶ್ರಮ ವ್ಯವಸ್ಥೆಯ ಕ್ರೌರ್ಯವು, ಅಸ್ಪೃಶ್ಯರನ್ನು (ಅವರ್ಣೀಯರನ್ನು) ಈ ಚಾತುರ್ವರ್ಣದ ಚೌಕಟ್ಟಿನಿಂದಲೇ ಹೊರಗಿಟ್ಟು ಅವರನ್ನು ಕೇವಲ ಅಗ್ಗದ ಕೂಲಿಗಾರರಾಗಿ ಅರ್ಥಾತ್ ಗುಲಾಮರನ್ನಾಗಿ ಬಳಸಿಕೊಳ್ಳುವಲ್ಲಿ ಅಡಗಿತ್ತು. ಅಸ್ಪೃಶ್ಯರಿಗೆ ಶಿಕ್ಷಣ, ಶಸ್ತ್ರಾಸ್ತ್ರ ಮತ್ತು ಆಸ್ತಿಯ ಹಕ್ಕನ್ನು ನಿರಾಕರಿಸುವ ಮೂಲಕ ಅವರನ್ನು ಬೌದ್ಧಿಕವಾಗಿ ಮತ್ತು ದೈಹಿಕವಾಗಿ ದಾಸ್ಯದ ಸಂಕೋಲೆಗೆ ದೂಡಲಾಗಿತ್ತು. ಸಮಾಜದ ಲೆಕ್ಕಾಚಾರದಲ್ಲಿ ಅಥವಾ ರಾಜಕೀಯ ಅನುಕೂಲಕ್ಕಾಗಿ ಮಾತ್ರ ಅವರನ್ನು ಹಿಂದೂಗಳೆಂದು ಕರೆದರೂ, ಸಾಮಾಜಿಕವಾಗಿ ದೇವಸ್ಥಾನ ಪ್ರವೇಶ ನಿರಾಕರಿಸುವುದು, ಕನಿಷ್ಠ ಕುಡಿಯುವ ನೀರನ್ನೂ ಸ್ವತಂತ್ರವಾಗಿ ಪಡೆದುಕೊಳ್ಳಲಾಗದಂತೆ ಮಾಡುವುದು ಅತಿದೊಡ್ಡ ಬೌದ್ಧಿಕ ವಂಚನೆ ಎಂದು ಅಂಬೇಡ್ಕರ್ ವಾದಿಸಿದ್ದರು.

ಈ ವ್ಯವಸ್ಥೆ ಕೇವಲ ಶ್ರಮವನ್ನು ವಿಭಜನೆ ಮಾಡದೆ, ಶ್ರಮಿಕರನ್ನೇ ಪರಸ್ಪರ ದ್ವೇಷಿಸುವಂತೆ ವಿಭಜಿಸಿತ್ತು. ಈ ಮಾನಸಿಕ ಮತ್ತು ಸಾಮಾಜಿಕ ಗುಲಾಮಗಿರಿಯಿಂದ ಮುಕ್ತಿ ಪಡೆಯಲು ಅಸ್ಪೃಶ್ಯರು ಈ ಧಾರ್ಮಿಕ ಚೌಕಟ್ಟಿನಿಂದ ಹೊರಬರುವುದು ಅನಿವಾರ್ಯ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದರೆ, ಈ ಅಮಾನವೀಯ ಚೌಕಟ್ಟಿನಲ್ಲಿಟ್ಟು ಅಸ್ಪೃಶ್ಯರನ್ನು ಹಿಂದೂಗಳೆಂದು ಕರೆಯಬೇಕೆಂದರೆ, ಅಂತಹ ಚೌಕಟ್ಟೇ ಅವರಿಗೆ ಅಗತ್ಯವಿಲ್ಲ ಎಂದಿದ್ದರು.

1930ರ ದಶಕದ ದುಂಡು ಮೇಜಿನ ಪರಿಷತ್ತುಗಳಲ್ಲಿ ಅಂಬೇಡ್ಕರ್ ಅವರು ಅಸ್ಪೃಶ್ಯರ ಪರವಾಗಿ ಮಂಡಿಸಿದ ವಾದವು ಅವರ ರಾಜಕೀಯ ಪ್ರಬುದ್ಧತೆಗೆ ಇನ್ನೊಂದು ಸಾಕ್ಷಿ. ಅಸ್ಪೃಶ್ಯರನ್ನು ಹಿಂದೂ ಧರ್ಮದ ಭಾಗವೆಂದು ಅಥವಾ ಹಿಂದೂಗಳೆಂದು ಒಪ್ಪಿಕೊಳ್ಳಲು ನಿರಾಕರಿಸಿದ ಅವರು, ಮುಸ್ಲಿಮರು ಅಥವಾ ಸಿಖ್ಖರಂತೆ ಅಸ್ಪೃಶ್ಯರನ್ನೂ ಪ್ರತ್ಯೇಕ ರಾಜಕೀಯ ಅಲ್ಪಸಂಖ್ಯಾತರು ಎಂದು ಪರಿಗಣಿಸಬೇಕೆಂದು ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಿದರು. ''ಹಿಂದೂ ಸಮೂಹದ ಒಳಗೇ ಅಸ್ಪೃಶ್ಯರನ್ನು ಸೇರಿಸಿದರೆ, ಬಹುಸಂಖ್ಯಾತ ಮೇಲ್ವರ್ಗವು ಅಲ್ಪಸಂಖ್ಯಾತ ಅಸ್ಪೃಶ್ಯರ ಧ್ವನಿಯನ್ನು ಹತ್ತಿಕ್ಕುತ್ತದೆ'' ಎಂಬುದು ಅವರ ದೂರದೃಷ್ಟಿಯಾಗಿತ್ತು. 1932ರ ಪೂನಾ ಒಪ್ಪಂದದವರೆಗೂ ಅವರು ಈ ಪ್ರತ್ಯೇಕ ಗುರುತಿನ ಹಕ್ಕಿಗಾಗಿ ಹೋರಾಟ ಮುಂದುವರೆಸಿದ್ದರು.

ಹಿಂದೂ ಸಮಾಜದಲ್ಲಿ ಶುದ್ಧ ಮತ್ತು ಅಶುದ್ಧ ಎಂಬ ಕಲ್ಪನೆಗಳಿವೆ. ಅಸ್ಪೃಶ್ಯರ ಮೇಲೆ ಹುಟ್ಟಿದಾಗಿನಿಂದಲೇ ಅಪವಿತ್ರ ಎಂಬ ಮುದ್ರೆ ಒತ್ತಲಾಗಿರುತ್ತದೆ. ಹಿಂದೂ ಎನಿಸಿಕೊಂಡವನೊಬ್ಬ ಮುಸ್ಲಿಂ ಅಥವಾ ಕ್ರಿಶ್ಚಿಯನ್ ವ್ಯಕ್ತಿಯನ್ನು ಮುಟ್ಟಿದರೆ ಹಿಂದೂವಿಗೆ ಮೈಲಿಗೆಯಾಗುವುದಿಲ್ಲ, ಆದರೆ ಒಬ್ಬ ಅಸ್ಪೃಶ್ಯನನ್ನು ಮುಟ್ಟಿದರೆ ಮೈಲಿಗೆಯಾಗುತ್ತದೆ. ಅಂದರೆ, ಹಿಂದೂ ಧರ್ಮವು ಅಸ್ಪೃಶ್ಯರನ್ನು ಅನ್ಯ ಧರ್ಮೀಯರಿಗಿಂತಲೂ ಕೆಟ್ಟದಾಗಿ ಕಾಣುತ್ತದೆ. ಈ ಸಾಮಾಜಿಕ ಅಂತರವೇ ( ) ಅವರು ಹಿಂದೂಗಳಲ್ಲ ಎಂಬುದಕ್ಕೆ ಅತಿ ದೊಡ್ಡ ಪುರಾವೆಯಾಗಿದೆ ಎನ್ನುತ್ತಾರೆ ಅವರ ಅನಿಹಿಲೇಷನ್ ಆಫ್ ಕಾಸ್ಟ್ ಕೃತಿಯಲ್ಲಿ.

ಈ ವಿಷಯದಲ್ಲಿ ಅವರ ದೃಢ ನಿಲುವು ಹೇಗಿತ್ತೆಂದರೆ, 1932ರ ಲೋಥಿಯನ್ ಸಮಿತಿ ( ) ಮುಂದೆ ಸಾಕ್ಷ್ಯ ನುಡಿಯುವಾಗ ಅಂಬೇಡ್ಕರ್ ಅವರು ಅಸ್ಪೃಶ್ಯರನ್ನು ಹಿಂದೂಗಳಿಗಿಂತ ಪ್ರತ್ಯೇಕವಾಗಿ ಗುರುತಿಸಬೇಕು ಎಂದು ಒತ್ತಾಯಿಸುತ್ತಾರೆ. ''ಹಿಂದೂಗಳ ಹಿತಾಸಕ್ತಿ ಮತ್ತು ಅಸ್ಪೃಶ್ಯರ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿವೆ. ಹಿಂದೂಗಳು ಅಸ್ಪೃಶ್ಯರನ್ನು ಶೋಷಿಸುವ ವರ್ಗಕ್ಕೆ ಸೇರಿದವರು. ಶೋಷಕ ಮತ್ತು ಶೋಷಿತ ಇಬ್ಬರೂ ಒಂದೇ ಸಮುದಾಯಕ್ಕೆ ಸೇರಿದವರು ಎಂದು ಹೇಳುವುದು ಒಂದು ಕ್ರೂರ ವ್ಯಂಗ್ಯ'' ಎನ್ನುವುದು ಅವರ ವಾದ. ಈ ಕಾರಣಕ್ಕಾಗಿಯೇ ಅವರು ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಮತಗಟ್ಟೆಗಳಿಗಾಗಿ ( ) ಹೋರಾಡಿದರು. ಅವರ ಪ್ರಕಾರ, ರಾಜಕೀಯವಾಗಿ ಅಸ್ಪೃಶ್ಯರು, ಬಹುಸಂಖ್ಯಾತ ಹಿಂದೂಗಳಿಂದ ರಕ್ಷಿಸಲ್ಪಡಬೇಕಾದ ಅಲ್ಪಸಂಖ್ಯಾತರೇ ( ) ಆಗಿದ್ದಾರೆ.

ಅಸ್ಪೃಶ್ಯತೆಯು ಆಕಸ್ಮಿಕವಾಗಿ ಸಂಭವಿಸಿದ ಘಟನೆಯಲ್ಲ, ಬದಲಿಗೆ ಅದು ಬೌದ್ಧ ಧರ್ಮ ಮತ್ತು ಬ್ರಾಹ್ಮಣಶಾಹಿಯ ನಡುವಿನ ಸುದೀರ್ಘ ಸಂಘರ್ಷದ ಫಲಿತಾಂಶವಾಗಿದೆ ಎನ್ನುತ್ತಾರೆ ಬಾಬಾ ಸಾಹೇಬರು. ಅಂದು ಯುದ್ಧಗಳಲ್ಲಿ ಸೋತು ಚದುರಿಹೋಗಿದ್ದ ಅಲೆಮಾರಿಗಳು ಸಮಾನತೆ ಸಾರುವ ಬೌದ್ಧ ಧರ್ಮವನ್ನು ಅಪ್ಪಿಕೊಂಡಿದ್ದರು. ಇದು ಯಜ್ಞ-ಯಾಗಾದಿ ಮತ್ತು ಪ್ರಾಣಿಬಲಿಯನ್ನು ಆಧರಿಸಿದ್ದ ಅಂದಿನ ಬ್ರಾಹ್ಮಣಶಾಹಿ ವ್ಯವಸ್ಥೆಗೆ ದೊಡ್ಡ ಸವಾಲಾಗಿ ಪರಿಣಮಿಸಿತು. ಬೌದ್ಧ ಧರ್ಮದ ಪ್ರಭಾವದಿಂದ ಬ್ರಾಹ್ಮಣರ ವರ್ಚಸ್ಸು ಕಡಿಮೆಯಾಗತೊಡಗಿತು. ಆಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಮಾಂಸಾಹಾರವನ್ನೇ ತ್ಯಜಿಸಿ ಸಸ್ಯಾಹಾರವನ್ನು ಒಪ್ಪಿಕೊಂಡರು ಹಾಗೂ ಹಸುವನ್ನು ಪವಿತ್ರ ಎಂದು ಘೋಷಿಸಿಕೊಂಡರು.

ಆದರೆ, ಊರಿನ ಹೊರಗೆ ವಾಸಿಸುತ್ತಿದ್ದ ಬಡ ಬೌದ್ಧರು (ಅಸ್ಪೃಶ್ಯರು) ಹಸಿವು ನೀಗಿಸಿಕೊಳ್ಳಲು ಸತ್ತ ದನದ ಮಾಂಸ ತಿನ್ನುವುದನ್ನು ಮುಂದುವರಿಸಿದರು. ಇದನ್ನೇ ಆಯುಧವಾಗಿ ಬಳಸಿಕೊಂಡ ಬ್ರಾಹ್ಮಣಶಾಹಿ, ಗೋಮಾಂಸ ಭಕ್ಷಣೆಯನ್ನು ಮಹಾಪಾಪ ಎಂದು ಘೋಷಿಸಿತು. ಯಾರು ಬೌದ್ಧ ಧರ್ಮವನ್ನು ಬಿಡಲಿಲ್ಲವೋ, ಗೋಮಾಂಸ ತಿನ್ನುವುದನ್ನು ಮುಂದುವರಿಸಿದರೋ ಅಂತಹವರನ್ನು ಅಸ್ಪೃಶ್ಯರು ಎಂದು ಘೋಷಿಸಿ ಸಮಾಜದಿಂದ ಸಂಪೂರ್ಣವಾಗಿ ಬಹಿಷ್ಕರಿಸಿತು. ಅಂದರೆ, ಅಸ್ಪೃಶ್ಯತೆಯು ಬೌದ್ಧರನ್ನು ದಮನ ಮಾಡಲು ಸೃಷ್ಟಿಸಿದ ಒಂದು ಸಾಮಾಜಿಕ ಆಯುಧವೇ ಹೊರತು ಧರ್ಮದ ಭಾಗವಾಗಿರಲಿಲ್ಲ.

ಬಾಬಾ ಸಾಹೇಬರ ಈ ಕ್ರಾಂತಿಕಾರಿ ಸಿದ್ಧಾಂತದ ಸಾರಾಂಶವೇ ಇದು, ಅಸ್ಪೃಶ್ಯರು ಹಿಂದೂ ಧರ್ಮದ ಶ್ರೇಣೀಕೃತ ವ್ಯವಸ್ಥೆಯ ಭಾಗವಾಗಿ ಹುಟ್ಟಿದವರಲ್ಲ; ಬದಲಿಗೆ ಅವರು ಹಿಂದೂ ಧರ್ಮದ ಸಿದ್ಧಾಂತಗಳನ್ನು ವಿರೋಧಿಸಿದ ಕಾರಣಕ್ಕಾಗಿ ಬಲವಂತವಾಗಿ ಕೆಳಹಂತಕ್ಕೆ ತಳ್ಳಲ್ಪಟ್ಟ ಮೂಲ ಬೌದ್ಧರು. ''ಅಸ್ಪೃಶ್ಯರು ಹಿಂದೂ ಸಮಾಜದ ಅಂಗವಲ್ಲ, ಅವರು ಅನ್ಯಾಯವಾಗಿ ಸೋಲಿಸಲ್ಪಟ್ಟ ಪ್ರತ್ಯೇಕ ಗುರುತಿನ ಜನರು'' ಎಂದು ಪ್ರತಿಪಾದಿಸಿದರು.

ಒಂದು ಧರ್ಮವು ತನ್ನದೇ ಒಂದು ವರ್ಗವನ್ನು ಎಷ್ಟು ಅಸಹ್ಯವಾಗಿ ಕಾಣುತ್ತದೆ ಎಂದರೆ, ಆ ವರ್ಗದ ನೆರಳು ಕೂಡ ಮೈಲಿಗೆ ಎಂದು ಭಾವಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆ ವರ್ಗವು ಆ ಧರ್ಮದ ಭಾಗವಾಗಿರುವುದು ಹೇಗೆ ಸಾಧ್ಯ? ಇದು ಅತ್ಯಂತ ಕ್ರೂರ, ಅಮಾನವೀಯ ಧಾರ್ಮಿಕ ಬಹಿಷ್ಕಾರ. ಹಾಗಾಗಿಯೇ ಅವರು, ''ಹಿಂದೂ ಸಮಾಜವು ಒಂದು ಮಹಲು ಇದ್ದಂತೆ, ಆದರೆ ಅಲ್ಲಿ ಒಂದು ಮಹಡಿಯಿಂದ ಇನ್ನೊಂದು ಮಹಡಿಗೆ ಹೋಗಲು ಏಣಿಗಳಿಲ್ಲ (). ಇಲ್ಲಿ ಪ್ರತಿಯೊಂದು ಜಾತಿಯೂ ಒಂದು ಮುಚ್ಚಿದ ಕೋಣೆ'' ಎಂದು ಬಣ್ಣಿಸಿದ್ದರು.

1956ರ ಅಕ್ಟೋಬರ್ 14ರಂದು ನಾಗಪುರದ ವಿಶಾಲ ಮೈದಾನದಲ್ಲಿ ನಡೆದ ದೀಕ್ಷಾ ಸಮಾರಂಭವು ಭಾರತದ ಸಾಮಾಜಿಕ ಇತಿಹಾಸದಲ್ಲೇ ಅತಿದೊಡ್ಡ ಧಾರ್ಮಿಕ ಕ್ರಾಂತಿ. ಸುಮಾರು ಐದು ಲಕ್ಷಕ್ಕೂ ಹೆಚ್ಚು ಅನುಯಾಯಿಗಳೊಂದಿಗೆ ಬಿಳಿ ವಸ್ತ್ರಧಾರಿಗಳಾಗಿ ಬಂದಿದ್ದ ಅಂಬೇಡ್ಕರ್, ಹಿರಿಯ ಭಿಕ್ಷು ಚಂದ್ರಮಣಿ ಅವರಿಂದ ಬೌದ್ಧ ಧರ್ಮದ ದೀಕ್ಷೆ ಪಡೆದರು. ತಾವು ಬೌದ್ಧ ಧರ್ಮ ಸ್ವೀಕರಿಸುವುದರ ಜತೆಗೆ, ತಾವೇ ಸ್ವತಃ ಎದ್ದು ನಿಂತು ತಮ್ಮ ಲಕ್ಷಾಂತರ ಅನುಯಾಯಿಗಳಿಗೆ 22 ಪ್ರತಿಜ್ಞೆಗಳನ್ನು ಬೋಧಿಸಿದರು. ಈ ಪ್ರತಿಜ್ಞೆಗಳು ಹಿಂದೂ ಧರ್ಮದ ಶ್ರೇಣೀಕೃತ ಅಸಮಾನತೆ ಮತ್ತು ಮೂಢನಂಬಿಕೆಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಮಾನವೀಯತೆ ಮತ್ತು ಸಮಾನತೆಯ ಹಾದಿಯಲ್ಲಿ ನಡೆಯುವ ಸಂಕಲ್ಪವಾಗಿದ್ದವು.

ಈ ಘಟನೆಯನ್ನು ಅಂಬೇಡ್ಕರ್ ಮತಾಂತರ ಎಂದು ಕರೆಯುವ ಬದಲು ಮೂಲ ಮನೆಗೆ ಮರಳುವಿಕೆ ಎಂದು ಭಾವಿಸಿದ್ದರು. ಅಸ್ಪೃಶ್ಯತೆಯ ನರಕಯಾತನೆಯಿಂದ ವಿಮೋಚನೆ ಪಡೆಯಲು ಮತ್ತು ಘನತೆಯ ಬದುಕು ಕಟ್ಟಿಕೊಳ್ಳಲು ಬೌದ್ಧ ಧರ್ಮವೇ ಏಕೈಕ ಮಾರ್ಗ ಎಂದು ಸಾರಿದರು. ''ನಾನು ಇಂದು ನರಕದಿಂದ ಮುಕ್ತನಾಗಿದ್ದೇನೆ'' ಎಂದು ಭಾವಪರವಶರಾಗಿ ನುಡಿದ ಬಾಬಾ ಸಾಹೇಬರ ಈ ಕ್ರಾಂತಿಕಾರಿ ಹೆಜ್ಜೆ, ಭಾರತದ ಶೋಷಿತ ವರ್ಗದ ಜನರಿಗೆ ಆತ್ಮಗೌರವ ಮತ್ತು ಘನತೆಯ ಬದುಕಿನ ಕಡೆಗೆ ಸಾಗಲು ಹೊಸ ಆಯಾಮವನ್ನು ನೀಡಿತು. ಕೋಟ್ಯಂತರ ಜನರ ಅಸ್ತಿತ್ವದ ಪ್ರಶ್ನೆಯನ್ನು ಮುಂದಿಟ್ಟುಕೊಂಡೇ ಬಾಬಾ ಸಾಹೇಬರು ''ಪರಿಶಿಷ್ಟರು ಹಿಂದೂಗಳಲ್ಲ'' ಎಂದು ಪ್ರತಿಪಾದಿಸಿದರು. ಇದು ಧಾರ್ಮಿಕ ವಿರೋಧವಾಗಿರಲಿಲ್ಲ; ಶೋಷಿತರಿಗೆ ಹಿಂದೂ ಎಂಬ ಸೋಗಿನ ಗುಲಾಮಗಿರಿಯಿಂದ ಮುಕ್ತಿ ನೀಡಿ, ಅವರಿಗೆ ತಮ್ಮದೇ ಆದ ಸ್ವತಂತ್ರ ರಾಜಕೀಯ ಮತ್ತು ಸಾಮಾಜಿಕ ಗುರುತನ್ನು ( ) ನೀಡುವ ಭರವಸೆಯಾಗಿತ್ತು.

ಇಂದು ಪರಿಶಿಷ್ಟ ಜಾತಿಗಳು ಮತ್ತು ಶೋಷಿತ ವರ್ಗಗಳು ಸಾಂವಿಧಾನಿಕವಾಗಿ ಪಡೆಯುತ್ತಿರುವ ಪ್ರತಿಯೊಂದು ಹಕ್ಕು ಮತ್ತು ಗೌರವದ ಹಿಂದೆ, ಅಂದು ಬಾಬಾ ಸಾಹೇಬರು ಮಂಡಿಸಿದ ಕ್ರಾಂತಿಕಾರಿ ಸಿದ್ಧಾಂತಗಳ ಬಲವಿದೆ. ಅಸ್ಪೃಶ್ಯರನ್ನು ಹಿಂದೂ ಸಮಾಜದ ಅವಶೇಷಗಳಂತೆ ಬದುಕುವುದರಿಂದ ಬಿಡಿಸಿ, ಅವರನ್ನು ಆಧುನಿಕ ಭಾರತದ ನಿರ್ಮಾತೃಗಳಾಗಿ ರೂಪಿಸಿದರು. ಅವರ ಪ್ರತಿಪಾದನೆಗಳು ಇಂದಿಗೂ ಸಮಾಜದಲ್ಲಿ ಸಮಾನತೆ ಮತ್ತು ಮಾನವೀಯತೆಯನ್ನು ಅಳೆಯುವ ಅಳತೆಗೋಲುಗಳಾಗಿ ಉಳಿದಿವೆ.

''ಗುಲಾಮನಿಗೆ ಅವನು ಗುಲಾಮನೆಂದು ನೆನಪಿಸಿ, ಆಗ ಅವನು ಬಂಡೇಳುತ್ತಾನೆ'' ಎಂಬ ಅವರ ಮಾತುಗಳೇ ಸಾಕು, ಇಂದಿಗೂ ವೈಚಾರಿಕ ದಾಸ್ಯದಲ್ಲಿ, ಅಂಧಶ್ರದ್ಧೆಯಲ್ಲಿ ಮತ್ತು ಅನ್ಯರ ಕೃಪಾಕಟಾಕ್ಷದಡಿ ಗುಲಾಮರಂತೆ ಬದುಕುತ್ತಿರುವವರ ಸುಪ್ತಪ್ರಜ್ಞೆಯನ್ನು ಬಡಿದೆಬ್ಬಿಸಲು. ಯಾರು ತಮ್ಮ ಆತ್ಮಗೌರವವನ್ನು ಮರೆತು ಪರರ ಹಂಗಿನಲ್ಲಿ ಬದುಕುತ್ತಿದ್ದಾರೋ, ಅಂತಹವರ ಎದೆಯೊಳಗೆ ಈ ಮಾತುಗಳು ಕಿಚ್ಚು ಹಚ್ಚಬೇಕು. ದೈಹಿಕ ಗುಲಾಮಗಿರಿಗಿಂತ ಮಾನಸಿಕ ಗುಲಾಮಗಿರಿ ಅತ್ಯಂತ ಅಪಾಯಕಾರಿ. ಆ ಸಂಕೋಲೆಗಳನ್ನು ಪುಡಿಗಟ್ಟಿ, ಅಂಬೇಡ್ಕರ್ ಅವರು ತೋರಿದ ಆತ್ಮಗೌರವದ ಹಾದಿಯಲ್ಲಿ ಎದೆಯುಬ್ಬಿಸಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ.

ನಾನು ಮುಸ್ಲಿಂ ಸಮುದಾಯದ ಸುಪ್ರೀಂ ಲೀಡರ್ ಅಲ್ಲ


ದಾವಣಗೆರೆಯಲ್ಲಿ ನನ್ನ ಕೆಲಸ ನಿಭಾಯಿಸಿದ್ದೇನೆ: ಸಚಿವ ಜಮೀರ್ ಅಹಮದ್ ಖಾನ್

ಬೆಂಗಳೂರು: ನಾನು ಮುಸ್ಲಿಂ ಸಮುದಾಯದ ಸುಪ್ರೀಂ ಲೀಡರ್ ಅಲ್ಲ. ದಾವಣಗೆರೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದ್ದರಲ್ಲಿ ಮುಚ್ಚುಮರೆ ಏನಿಲ್ಲ. ದಾವಣಗೆರೆಯಲ್ಲಿ ನನ್ನ ಕೆಲಸ ನಿಭಾಯಿಸಿದ್ದೇನೆ ಎಂದು ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಚಾಮರಾಜಪೇಟೆಯಲ್ಲಿ ಮಾತನಾಡಿದ ಅವರು, ನಾನು ಲೀಡರ್ ಆಗಲು ಹೊರಟಿಲ್ಲ. ಮುಂದೆಯೂ ಲೀಡರ್ ಆಗೋಕೆ ಹೋಗಲ್ಲ. ನಾನೊಬ್ಬ ಸೇವಕ, ಸೇವೆ ಮಾಡುತ್ತಿದ್ದೇನೆ ಅಷ್ಟೇ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತ. ದಾವಣಗೆರೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದರಲ್ಲಿ ಮುಚ್ಚುಮರೆ ಏನಿಲ್ಲ. ನಾನು ಯಾವುದೇ ಮುಚ್ಚುಮರೆ ಮಾಡಿಲ್ಲ. ಓಪನ್ ಆಗಿ ನಾನು ಕೆಪಿಸಿಸಿ ಸಭೆಯಲ್ಲಿ ಹೇಳಿದ್ದೆ. ನಾನು ಜಬ್ಬಾರ್ ಹೆಸರು ಹೇಳಿಲ್ಲ. ಜಬ್ಬಾರ್ ಬದಲು ಏಳು ಮಂದಿ ಮುಸ್ಲಿಮರಿಗೆ ಯಾರಿಗಾದರೂ ಕೊಡಿ ಅಂದಿದ್ದೆ. ಶಿಗ್ಗಾವಿಯನ್ನು ಕೇಳಿ ತೆಗೆದುಕೊಂಡ್ವಿ. ದಾವಣಗೆರೆಯಲ್ಲೂ ಯಾರಿಗಾದರೂ ಕೊಡಿ, ನಾವು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಸಭೆಯಲ್ಲಿ ಓಪನ್ ಆಗಿ ಡಿಕೆಶಿ ಅವರ ಮುಂದೆ ಹೇಳಿದ್ದೇನೆ. ಗೆಲ್ಲಿಸಿಕೊಂಡು ಬರಲಿಲ್ಲ ಅಂದರೆ ರಾಜೀನಾಮೆ ಕೊಡ್ತೀನಿ ಅಂತ ಹೇಳಿದ್ದೆ. ನಾವು ಮುಚ್ಚುಮರೆ ಇಲ್ಲದೇ ಮಾತನಾಡಿದ್ದೇವೆ ಎಂದರು.

ಜಬ್ಬಾರ್ ರಾಜೀನಾಮೆ ಕೊಟ್ಟಿದ್ದಾರೆ. ಆಗ ನಾನು ಇರಲಿಲ್ಲ. ರಾಜೀನಾಮೆ ಕೊಟ್ಟಿದ್ದಾರೆ ಅಂತ ಗೊತ್ತಾಯ್ತು. ನಸೀರ್ ಅವರನ್ನು ಕೈಬಿಟ್ಟಿದ್ದು ನನಗೆ ಗೊತ್ತಿಲ್ಲ. ಈಗ ಸಿಎಂ ಅವರ ಮನೆಗೆ ಹೋಗಿ ಮಾತನಾಡುತ್ತೇನೆ ಎಂದರು.

ಸುದ್ದಿಗೋಷ್ಠಿ ಮಾಡಿರುವವರು ಯಾರಾದರೂ ಹೆಸರು ಹೇಳಿದ್ದಾರಾ?. ಅಲ್ಲಿ ಮುಸಲ್ಮಾನರ ಅಸಮಾಧಾನ ಇದ್ದಿದ್ದು ನಿಜ. ಮುಸ್ಲಿಮರಿಗೆ ಟಿಕೆಟ್ ಕೇಳಿದ್ರೂ ಟಿಕೆಟ್ ಕೊಟ್ಟಿಲ್ಲ ಅನ್ನೋ ಅಸಮಾಧಾನ ಇತ್ತು. ಅದು ಸರಿ ಹೋಗಿ ಪಕ್ಷದ ಅಭ್ಯರ್ಥಿಯಾಗಿ ಸಮರ್ಥ್ ಅವರಿಗೆ ಅವಕಾಶ



ಕೊಟ್ಟರು. ಈಗ ನಾವು ಅಲ್ಲಿ ಗೆದ್ದೇ ಗೆಲ್ತೇವೆ. ನಾನೊಬ್ಬ ಸಾಮಾನ್ಯ ಕಾರ್ಯಕರ್ತ ಎಂದು ತಿಳಿಸಿದರು.

ಜಬ್ಬಾರ್ ಅವರು ಮೊದಲು ಟಿಕೆಟ್ ಕೇಳಿದ್ದು ಸರಿ. ಆದರೆ, ತೀರ್ಮಾನ ಮಾಡಬೇಕಾಗಿರೋದು ಹೈಕಮಾಂಡ್. ಜಬ್ಬಾರ್‌ಗೆ ಕೊಡೋದಕ್ಕೆ ಆಗಲ್ಲ ಅಂತ ಹೈಕಮಾಂಡ್ ಚಿಂತನೆ ಮಾಡ್ತಾ ಇದೆ ಅಂದಾಗ ಯಾರಿಗಾದರೂ ಕೊಡಿ ಅಂತ ಹೇಳಿದ್ದೇವೆ. ಜಬ್ಬಾರ್ ಅವರು ಎಂಎಲ್‌ಸಿ ಇದ್ದಾರೆ. ಅವರಿಗೆ ಕೇಳೋದು ಸರಿ ಅಲ್ಲ ಅಂತ ಆದ್ಮೇಲೆ ಬೇರೆಯವರಿಗೆ ಅವಕಾಶ ಕೊಡಿ ಅಂತ ಕೇಳಿದ್ದೇವೆ ಎಂದರು.

ದಾವಣಗೆರೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಮಲ್ಲಿಕಾರ್ಜುನ್ ಅವರು ನಮ್ಮ ಪಕ್ಕದ ಮನೆಗೆ ಬಂದು ನಮ್ಮ ಮನೆಗೆ ಬಂದಿಲ್ಲ ಅಂತಾ ಜಬ್ಬಾರ್ ಹೇಳಿದ್ರು. ನಾನು ಸ್ಥಳೀಯ ಲೀಡರ್ ಅವರ ಜೊತೆಯಲ್ಲೇ ಇದ್ದವನು. ನಮ್ಮ ಮನೆಗೆ ಕನಿಷ್ಠ ಬರಬೇಕಿತ್ತಲ್ವಾ ಎಂದು ಜಬ್ಬಾರ್ ಬೇಜಾರಾಗಿದ್ರು. ಜೊತೆಗೆ ಅವರ ಆರೋಗ್ಯ ಕೂಡ ಚೆನ್ನಾಗಿರಲಿಲ್ಲ ಅಂತ ಮಾಧ್ಯಮಕ್ಕೂ ಹೇಳಿದ್ದಾರೆ. ನಾನು ಕೂಡ ಜಬ್ಬಾರ್ ಜೊತೆ ಮಾತನಾಡಿ, ಹೋಗಿ ಕೆಲಸ ಮಾಡಿ ಅಂತ ಹೇಳಿದ್ದೆ ಎಂದು ತಿಳಿಸಿದರು.

ನಜೀರ್ ಅಹ್ಮದ್ ಅವರಿಗೆ ಬಾಗಲಕೋಟೆಯಲ್ಲಿ ಜವಾಬ್ದಾರಿ ಕೊಟ್ಟಿದ್ದರು. ನಾನು ದಾವಣಗೆರೆಗೆ ಬಂದು ಹೋಗ್ತೇನೆ ಅಂತ ನಸೀರ್ ಅವರು ಸಿಎಂ ಅವರಿಗೆ ಹೇಳಿದ್ದರು. ಅಲ್ಪಸಂಖ್ಯಾತರ ಎಲ್ಲರೂ ಒಗ್ಗಟ್ಟಾಗಿ ಇದ್ದೇವೆ. ಯಾರು ಷಡ್ಯಂತ್ರ ಮಾಡಿದ್ದಾರೆ, ಯಾರು ಬೆನ್ನಿಗೆ ಚೂರಿ ಹಾಕಿದ್ದಾರೆ ಅನ್ನೋದನ್ನು ಹೆಸರು ಹೇಳಲಿ. ನನಗೆ ಹೈಕಮಾಂಡ್‌ನಿಂದ ಸ್ಟಾರ್ ಕ್ಯಾಂಪೇನರ್ ಆಗಿ ಕೇರಳಕ್ಕೆ ಹಾಕಿದ್ರು. ಆದರೂ ಮುಖ್ಯಮಂತ್ರಿಗಳು ಕರೆದಿದ್ದಕ್ಕೆ ನಾನು ಒಂದು ದಿನ ದಾವಣಗೆರೆಗೆ

ಬಂದಿದ್ದೇನೆ. ಮಲ್ಲಿಕಾರ್ಜುನ್ ಮನೇಲಿ ಊಟ ಮಾಡಿದ್ದೇನೆ. ಪ್ರೆಸ್ ಮೀಟ್ ಮಾಡಿದ್ದೇನೆ. ಸ್ಥಳೀಯ ಮುಸ್ಲಿಮರಲ್ಲಿ ಅಸಮಾಧಾನ ಇದ್ದದ್ದು ನಿಜ. ಆಮೇಲೆ ಸರಿ ಹೋಗಿದ್ದಾರೆ. ದಾವಣಗೆರೆ ದಕ್ಷಿಣವನ್ನು ಶೇ 100ರಷ್ಟು ಒಳ್ಳೆಯ ಲೀಡಲ್ಲಿ ಗೆಲ್ತೀವಿ. ನಾವೆಲ್ಲ ಒಟ್ಟಾಗಿದ್ದೇವೆ. ಎರಡು ಸ್ಥಾನವನ್ನೂ ಗೆಲ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಚಿವ ಸ್ಥಾನಕ್ಕಾಗಿ ಆರೋಪ ವಿಚಾರವಾಗಿ ಪ್ರತಿಕ್ರಿಯಿಸಿ, ಎಲ್ಲರಿಗೂ ಸಚಿವರಾಗುವ ಆಸೆ ಇರುವುದು ಸಹಜ. ಎಲ್ಲರೂ ಪ್ರಯತ್ನ ಮಾಡುತ್ತಾರೆ. ನನಗೂ ಸಚಿವ ಆಗಬೇಕು ಅಂತ ಆಸೆ ಇತ್ತು. ಈಗ ನಾನು ಸಚಿವ ಆಗಿದ್ದೇನೆ ಎಂದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR